# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper

75,000

HAMPI TIMES E-PAPER READERS


94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ:18 Issue:18 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 11.07.2024 11.07.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2


## ತುಂಗಭದ್ರಾ ನೀರಿನ ಮಟ್ಟ



| ಬುಧವಾರ : 10–07–2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.67 ಅಡಿ |
| ಒಳ ಹರಿವು | 27544 ಕ್ಯುಸೆಕ್ |
| ಹೊರ ಹರಿವು | 199 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.173 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1578.79 ಅಡಿ |
| ಒಳ ಹರಿವು | 9892 ಕ್ಯುಸೆಕ್ |
| ಹೊರ ಹರಿವು | 255 ಕ್ಯುಸೆಕ್ |
| ಸಾಮರ್ಥ್ಯ | 3.911 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

| 11–07–2024 – ಗುರುವಾರ | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವ ಫಾಲ್ಗುಣಿ |
| ಯೋಗ | : ವರಿಯಾಣ |
| ಕರಣ | : ಬಾಳವ |
| ಸೂರ್ಯೋದಯ | : 05:49:53 |
| ಸೂರ್ಯಾಸ್ತ | : 19:15:02 |
| ರಾಹು | : 14:13–15:54 |
| ಯಮಘಂಡ | : 05:50–07:31 |
| ಗುಳಿಕ | : 09:11–10:52 |

# ಚಾಲಕರ ಸುರಕ್ಷತೆಗೆ ಆದ್ಯತೆ
## ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ಅನುದಾನವಿದೆ
### ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ನಿರ್ಮಾಣದ ಕಟ್ಟಡ ಪರಿಶೀಲಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ



**ಹಂಪಿ ಟೈಮ್ಸ್ ಹೊಸಪೇಟೆ**
ದೇವರಾಜ್ ಅರಸ್ ಟ್ರಕ್ ಟರ್ಮಿನಲ್‌ಗೆ ಅಗತ್ಯ ಪ್ರಮಾಣದಲ್ಲಿ ಅನುದಾನ ನಿಗದಿಪಡಿಸಿ ನಿರ್ಮಿಸಲಾಗುತ್ತಿದೆ. ಈ ಟರ್ಮಿನಲ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಟ್ರಕ್‌ಗಳ ನಿಲುಗಡೆಗೆ ಮತ್ತು ಚಾಲಕರ ಸುರಕ್ಷತೆಗೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಹೇಳಿದರು.

ನಗರದ ಹೊರವಲದ ಟಿ.ಬಿ.ಡ್ಯಾಮ್ ಹತ್ತಿರದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ಸ್ಥಳಕ್ಕೆ ಶಾಸಕ ಹೆಚ್.ಆರ್.ಗವಿಯಪ್ಪ ಅವರೊಂದಿಗೆ ಟ್ರಕ್ ಟರ್ಮಿನಲ್‌ಗೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದರು.

ರಾಜ್ಯದಲ್ಲಿನ ಟ್ರಕ್ ಡ್ರೈವರ್‌ಗಳ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ರಾಜ್ಯದ ಅಲ್ಲಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಸುರಕ್ಷತೆಯ ದೃಷ್ಟಿಯಿಂದಾಗಿ ಟ್ರಕ್ ಟರ್ಮಿನಲ್ ನಿರ್ಮಾಣದಿಂದಾಗಿ ವಾಹನ ಚಾಲಕರಿಗೆ ಅನುಕೂಲವಾಗಲಿದೆ.ಎರಡು ಕಡೆಗಳಲ್ಲಿ ಶೌಚಾಲಯದ ವ್ಯವಸ್ಥೆ ಮತ್ತು 10 ಗ್ಯಾರೇಜ್‌ಗಳು ಇರಲಿವೆ. ಟ್ರಕ್ ಡ್ರೈವರ್ ಮತ್ತು ಕ್ಲೀನರ್‌ಗಳಿಗೆ ತಂಗುದಾಣದಲ್ಲಿ ಬೆಡ್‌ಗಳು ಮತ್ತು ಊಟದ ವ್ಯವಸ್ಥೆ ಸೇರಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

**ಸಸಿ ನೆಟ್ಟರು:** ಟ್ರಕ್ ಟರ್ಮಿನಲ್ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ವೇಳೆ ಸಚಿವರು, ಎಲ್ ಅಂಡ್ ಟಿ ಕಂಪನಿಯಿಂದ ಸಸಿಗಳನ್ನು ನೆಟ್ಟು ಟರ್ಮಿನಲ್‌ನಲ್ಲಿ ಸುಮಾರು 1500 ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ, ಸಾರಿಗೆ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಪ್ರಕಾಶ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್. ಎನ್. ಮೊಹಮ್ಮದ್ ಇಮಾಮ್ ನಿಯಾಜಿ, ತಹಸೀಲ್ದಾರ್ ವಿಶ್ವಜೀತ್ ಮೆಹತಾ, ಸಾರಿಗೆ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ, ಟರ್ಮಿನಲ್‌ನ ಅಧಿಕಾರಿ ಮತ್ತು ಸಿಬ್ಬಂದಿ, ಎಲ್ ಅಂಡ್ ಟಿ ಕಂಪನಿಯ ಅಧಿಕಾರಿಗಳು, ಟ್ರಕ್ ಯೂನಿಯನ್ ಸಂಘದ ಪ್ರಮುಖರು ಮತ್ತು ಇತರರು ಉಪಸ್ಥಿತರಿದ್ದರು.



# ಶೈಕ್ಷಣಿಕ ಧನ ಸಹಾಯ ಕಡಿತ ಆದೇಶ ಹಿಂಪಡೆಯಬೇಕು
## ಬೇಡಿಕೆಗಳ ದಿನ ಕಾರ್ಮಿಕರಿಂದ ಮನವಿ ಸಲ್ಲಿಕೆ




**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಕಾರ್ಮಿಕ ಕಲ್ಯಾಣ ಮಂಡಳಿಯ ಫಲಾನುಭವಿಗಳ ಮಕ್ಕಳ ಶೈಕ್ಷಣಿಕ ಧನ ಸಹಾಯವನ್ನು ಸರ್ಕಾರ ಕಡಿತಗೊಳಿಸಿದೆ, ಕೂಡಲೆ ಆದೇಶವನ್ನು ಹಿಂಪಡೆಯಬೇಕು ಎಂದು ಸರ್ಕಾರವನ್ನು ಸಿಐಟಿಯು ತಾಲೂಕು ಕಾರ್ಯದರ್ಶಿ ಎಸ್.ಜಗನ್ನಾಥ್ ಆಗ್ರಹಿಸಿದರು.

ಪಟ್ಟಣದ ಆಡಳಿತ ಸೌಧದ ಬಳಿ ಸೇರಿದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಸಂಘಟನೆಯಿಂದ ಬುಧವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. ಬಾಕಿ ಇರುವ ನೂರಾರು ಪಿಂಚಣಿ, ಮದುವೆ, ಶೈಕ್ಷಣಿಕ, ವೈದ್ಯಕೀಯ ಮೊದಲಾದ ಅರ್ಜಿಗಳನ್ನು ಇತ್ಯಾರ್ಥಪಡಿಸಬೇಕು. ಎನ್‌ಪಿಎಸ್ ರದ್ದುಗೊಳಿಸಿ ಒಪಿಎಸ್ ಮರುಸ್ಥಾಪಿಸಿ, ಇಪಿಎಸ್ ಪಿಂಚಣಿದಾರರಿಗೆ ಕನಿಷ್ಠ 9ಸಾವಿರ ರೂ.ಗಳ ಪಿಂಚಣಿ ಖಚಿತಪಡಿಸಬೇಕು ಎಂದರು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ವೈಜ್ಞಾನಿಕ ರೀತಿಯಲ್ಲಿ ಕುಶಲ ಕಾರ್ಮಿಕರಿಗೆ ಕನಿಷ್ಠ ವೇತನ 31ಸಾವಿರ ರೂ.ಗಳಿಗೆ ಜಾರಿಗೊಳಿಸಬೇಕು ಎಂದರು.

ರೈತ ವಿರೋಧಿ ಕೃಷಿ ಕಾನೂನುಗಳನ್ನು ವಾಪಾಸ್ ಪಡೆಯಬೇಕು, ಕೃಷಿ ಬೆಳೆಗಳಿಗೆ ಲಾಭದಾಯಕ ಬೆಂಬ ಬೆಲೆ ಖಾತರಿ ಪಡಿಸಬೇಕು. ಎಪಿಎಂಸಿ ವ್ಯವಸ್ಥೆಯನ್ನು ಬಲಗೊಳಿಸಬೇಕು. ಗೊಬ್ಬರ ಮತ್ತು ಕೃಷಿ ಇಡುವಳಿಗಳಿಗೆ ಸಬ್ಸಿಡಿ ಕಡಿತಗೊಳಿಸುವುದನ್ನು ನಿಲ್ಲಿಸಬೇಕು ಎನ್ನುವ ಜೊತೆಗೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಉಪತಹಸೀಲ್ದಾರ್ ಶಿವಕುಮಾರ್‌ಗೌಡರಿಗೆ ಮನವಿ ಸಲ್ಲಿಸಿದರು. ಸಂಘಟನೆಯ ಪದಾಧಿಕಾರಿಗಳಾದ ತಾಲೂಕು ಅಧ್ಯಕ್ಷ ಯು.ತೋಟೇಶ್, ಕೃಷ್ಣಮೂರ್ತಿ, ಎಂ.ಮಂಜುನಾಥ, ಗವಿಸಿದ್ದಪ್ಪ, ವಿ.ಪ್ರಶಾಂತ, ಮಹೇಶ, ಈ.ಮಲ್ಲೇಶ, ಎಂ.ಕೊಟ್ರೇಶ, ಮಾಭಾಷ, ನಾಗರಾಜ್ ಸೇರಿದಂತೆ ಪ್ರತಿಭಟನೆ ಬೆಂಬಲಿಸಿ ಮಾಳಮ್ಮ ಮತ್ತು ಚಾಂದ್ ಬೀ ಪಾಲ್ಗೊಂಡಿದ್ದರು.

# ಪರಿಶ್ರಮಕ್ಕೆ ತಕ್ಕ ಫಲ ನಿಶ್ಚಿತ ಈಗಿನಿಂದಲೇ ಅಭ್ಯಾಸ ಮಾಡಿ
## ಬಿಇಒ ಎಂ.ಚನ್ನಬಸಪ್ಪ ಹೇಳಿಕೆ । ಹಂಪಿ ಟೈಮ್ಸ್ ಮಾರ್ಗದರ್ಶಿ ಕಲಿಕೆಗೆ ಸಹಕಾರಿ





**ಹಂಪಿ ಟೈಮ್ಸ್ ಹೊಸಪೇಟೆ**
ಈ ಬಾರಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಆರಂಭದಿಂದಲೇ ಪರೀಕ್ಷಾ ಪೂರ್ವ ಸಿದ್ಧತೆ ನಡೆಸಲು ಮತ್ತು ಉತ್ತಮ ಅಂಕಗಳಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಹಂಪಿ ಟೈಮ್ಸ್ ಪತ್ರಿಕೆ ದಿನಕ್ಕೊಂದು ವಿಷಯದಂತೆ ಹಂಪಿಟೈಮ್ಸ್ ಮಾರ್ಗದರ್ಶಿಯಲ್ಲಿ ಪ್ರಶ್ನೋತ್ತರ ಸರಣಿ ಪ್ರಕಟಗೊಳಿಸಿ ಮಕ್ಕಳಲ್ಲಿ ಕಲಿಕಾ ಆಸಕ್ತಿಯನ್ನು ಇಮ್ಮಡಿಗೊಳಿಸುವ ಪ್ರಯತ್ನ ಮಾಡಿರುವುದು ಹೆಮ್ಮೆಯ ಸಂಗತಿ ಎಂದು ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ ಹೇಳಿದರು.

ನಗರದ ನೆಹರೂ ಕಾಲೋನಿಯ 15ನೇ ವಾರ್ಡ್ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ಹಂಪಿಟೈಮ್ಸ್ ಮಾರ್ಗದರ್ಶಿ ಕುರಿತು ಮಾತನಾಡಿದರು. ಪತ್ರಿಕೆ ನಾಲ್ಕು ಪುಟವಾದರೂ ಜಿಲ್ಲೆಯ ಸಮಗ್ರ ಸುದ್ದಿ, ಅಂಕಣಗಳು, ಯುವ ಬರಹಗಾರರ ಲೇಖನಗಳು, ಕವನಗಳ ಜೊತೆಗೆ ವಿದ್ಯಾರ್ಥಿಗಳ ಅಗತ್ಯತೆಯನ್ನು ಅರಿತು ಎಸ್ಸೆಸ್ಸೆಲ್ಸಿ ಮಾರ್ಗದರ್ಶಿಯನ್ನೂ ಆರಂಭಿಸಿರುವುದು ಸ್ವಾಗತರ್ಹವಾಗಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳು ಪಾಠವನ್ನು ಏಕಾಗ್ರತೆಯಿಂದ ಆಲಿಸಬೇಕು. ಪ್ರತಿನಿತ್ಯ ಪತ್ರಿಕೆಯಲ್ಲಿ ಪ್ರಕಟವಾಗುವ ಪಠ್ಯಾಧಾರಿತ ಪ್ರಶ್ನೋತ್ತರಗಳನ್ನು ಬರೆದಿಟ್ಟುಕೊಂಡು ಓದಿದರೆ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆಬಯಬಹುದಾಗಿದೆ. ಹಂಪಿ ಟೈಮ್ಸ್ ಪತ್ರಿಕೆ ಮುದ್ರಣ ಹಾಗೂ ಇ–ಪೇಪರ್‌ನಲ್ಲೂ ಪ್ರಶ್ನೋತ್ತರಗಳನ್ನು ಪ್ರಕಟಿಸುತ್ತಿದೆ. ಪ್ರತಿಯೊಬ್ಬ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಇದರ ಪ್ರಯೋಜನ ಪಡೆಯಬಹುದಾಗಿದೆ. ಪರಿಶ್ರಮವಿದ್ದಲ್ಲಿ ಫಲ ನಿಶ್ಚಿತ ಎಂಬುದುನ್ನು ಅರಿಯಲು ಈ ಬಾರಿ ಆರಂಭದಿಂದಲೇ ವಿದ್ಯಾರ್ಥಿಗಳು ಅಭ್ಯಾಸದಲ್ಲಿ ತೊಡಗಿ ಪರೀಕ್ಷಿಸಿಕೊಳ್ಳಬಹುದು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಶಾಲಾ ಮುಖ್ಯಗುರು ಅಯ್ಯಪ್ಪ ಮಾತನಾಡಿ, ಶಾಲೆಯಲ್ಲಿ ಶಿಕ್ಷಕರು ಮಾಡಿದ ಪಾಠಕ್ಕೆ ಸಂಬಂಧಿಸಿದಂತೆ ಪರೀಕ್ಷೆಯಲ್ಲಿ ಪ್ರಶ್ನೆಗಳು ಬರುತ್ತವೆ. ಪ್ರತಿಯೊಬ್ಬರೂ ಹೆಚ್ಚು ಅಂಕಗಳಿಸಲು ಸಾಧ್ಯವಿದೆ. ಈಗಿನಿಂದಲೇ ಅಭ್ಯಾಸ ಮಾಡಿದವರಿಗೆ ಪರೀಕ್ಷೆ ಭಯ ಎಂಬುದೇ ಇರುವುದಿಲ್ಲ. ಹಂಪಿ ಟೈಮ್ಸ್ ಮಾರ್ಗದರ್ಶಿ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ ಎಂದರು.

ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಮಾತನಾಡಿ, ಪ್ರತಿನಿತ್ಯ ಪತ್ರಿಕೆಯಲ್ಲಿ ನೀಡುವ ಪ್ರಶ್ನೋತ್ತರ ಸರಣಿ ಆಧರಿಸಿ ಪ್ರತಿ ತಿಂಗಳು ಪ್ರಶ್ನೆ ಪತ್ರಿಕೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ಆಯಾ ವಿಷಯಕ್ಕೆ ಉತ್ತರಿಸಿ ತಮ್ಮ ಕಲಿಕಾ ಸಾಮರ್ಥ್ಯವನ್ನು ಅರಿತುಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗ ದರ್ಶನ ದಂತೆ ಅಂದಿನ ಓದು, ಬರಹವನ್ನು ಅಂದೇ ಪೂರ್ಣಗೊಳಿಸುವ ನಿಟ್ಟಿನಲ್ಲಿ ಪರಿಶ್ರಮ ಪಟ್ಟರೆ ಯಶಸ್ಸು ವಿದ್ಯಾರ್ಥಿಗಳದ್ದಾಗಲಿದೆ ಎಂದರು.

ಸರ್ದಾರ್ ಪಟೇಲ್ ಹೈಸ್ಕೂಲ್ ಮುಖ್ಯಗುರು ರಾಹತ್ ನವಾಜ್ ಖಾನಂ, ಶಾಲಾ ಶಿಕ್ಷಕರು ಇದ್ದರು.



ಹೊಸಪೇಟೆಯ ರಾಣಿ ಚೆನ್ನಮ್ಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಂಪಿ ಟೈಮ್ಸ್ ಮಾರ್ಗದರ್ಶಿಯನ್ನು ಬರೆದಿಟ್ಟುಕೊಳ್ಳುತ್ತಿರುವ ಕ್ಷಣ



ಹೊಸಪೇಟೆ ತಾಲೂಕಿನ ಗಾದಿಗನೂರಿನ ಕರ್ನಾಟಕ ಪಬ್ಲಿಕ್ ಹೈಸ್ಕೂಲ್ ವಿದ್ಯಾರ್ಥಿಗಳು ಹಂಪಿ ಟೈಮ್ಸ್ ಮಾರ್ಗದರ್ಶಿ ನೋಡಿ ಬರೆಯುತ್ತಿರುವುದು

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

SCAN & READ E-PAPER

# A HERO

Most important 2 marks questions and answers

**1. Swami's father drew his attention to a report in the newspaper. What was the report about?**
**Answer:** The report was about the bravery of a village lad. When he was returning home in the jungle path suddenly he came face to face with tiger. He faced the tiger and climbed up the tree and stayed half a day. Afterwards, some people came that way and killed the tiger.

**2. Why did swami's father want him to sleep alone in the office room? (2016 June /2017 April)**
**Answer:** Swami was ordered by his father to sleep alone in his office so as to fight against the fear of darkness. Swami had the habit of sleeping with his granny which his father didn't like. Swami's father wanted to test his courage and so he ordered him to sleep in the office alone one night.

**3. How did swami react when his father challenged him to sleep alone in the office room? (2017 June, 2022 March)**
**Answer:** Swami's father challenged him to sleep alone in the office room to prove his bravery. Swami was initially hesitant and tried to make excuses, but eventually, he had no choice and he accepted the challenge. Swami tried to change the subject by asking his father to join the cricket club and made some desperate attempts to escape from his father.

**4. Why did Swami conclude that his father's proposition was frightful?**
**Answer:** Swami had a habit of sleeping beside his granny. He was afraid of sleeping alone. In this condition, Swami concluded that his father's proposition (suggestion) was frightful.

**5. Why do you think Swami looked at his granny and his mother while following his father to the room?**
**Answer:** Swami looked at his granny and his mother because he hoped that they would come to his rescue and ask his father not to compel Swami to sleep in the office room.

**6. As silence deepened in the room, what was Swami reminded of?**
**Answer:** As silence deepened in the room, Swami remembered all the stories of devils and ghosts he had heard from his chum Mani and the stories about Muni swami's father and his fourth class friend who had been carried off by a ghost.

**7. What made swami's father, his cook and his servant rush up to the office room? (2015 June)**
**Answer:** Swami had to sleep alone in his father's office room as per his father's challenge. Swami thought of ghosts to come and take him away. At that time suddenly a thief came into the room and Swami got scared and he fell. The thief shouted so loudly and that makes his father, cook and servant rush up to the office room.

**8. Though Swami was not courageous, he became a hero overnight. How?**
**Answer:** Swami thought the moving thing was a devil and he bit its ankle. It was a burglar and he made a terrible cry in pain. His father, cook and servant came there and caught the burglar. So Swami was honored and congratulated and became a hero.

**9. Why were congratulations showered on Swami?**
**Answer:** Congratulations were showered on Swami because unknowingly he helped to catch the most notorious house-breaker of the district.

**10. Do you think Swami really wanted to join the police? If not, what did he want to be?**
**Answer:** No, Swami, was not interested to join the police. He wanted to become an engine driver, railway guard or a bus conductor.

Hampi Times Margadarshi

Prepared by : **R.B.Gurubasavaraj. Asst Teacher.** GHS Basarakodu, HB.Halli Taluk


ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್ HAMPI TIMES

## ವಿಜ್ಞಾನ

# ಬಾಹ್ಯಾಕಾಶವು ಏಕೆ ಕಪ್ಪಾಗಿ ಕಾಣುತ್ತದೆ?

■ ಆರ್.ಬಿ.ಗುರುಬಸವರಾಜ

ತರಗತಿಯಲ್ಲಿ ಶಿಕ್ಷಕರು ಸೌರವ್ಯೂಹ ಮತ್ತು ಗೆಲಾಕ್ಸಿಗಳ ಬಗ್ಗೆ ಮಕ್ಕಳಿಗೆ ಹೇಳುತ್ತಿದ್ದರು. ಪ್ರೊಜೆಕ್ಟರ್ ಬಳಸಿ ಸೌರವ್ಯೂಹದ ಚಿತ್ರಗಳನ್ನು ಮತ್ತು ಕೆಲವು ವೀಡಿಯೋ ತುಣುಕುಗಳನ್ನು ತೋರಿಸುತ್ತಿದ್ದರು. ಸೌರವ್ಯೂಹದ ಚಿತ್ರ ನೋಡುತ್ತಿದ್ದ ಪ್ರಿಯಾಂಕಳಿಗೆ ತಕ್ಷಣ ಪ್ರಶ್ನೆಯೊಂದು ಕಾಡಿತು. ತಟ್ಟನೆ ಎದ್ದು ಶಿಕ್ಷಕರನ್ನು ಕೇಳಿದಳು. "ಸರ್, ನಮ್ಮ ಭೂಮಿಯಿಂದ ಆಕಾಶ ನೀಲಿಯಾಗಿ ಕಾಣುತ್ತದೆ. ಆದರೆ ಬಾಹ್ಯಾಕಾಶ ಏಕೆ ಕಪ್ಪಾಗಿದೆ" ಎಂದಳು. ಅವಳ ಪ್ರಶ್ನೆಗೆ ಖುಷಿಗೊಂಡ ಶಿಕ್ಷಕರು ಅದರ ಬಗ್ಗೆ ಹೇಳತೊಡಗಿದರು.

ಹೌದು ನಿನ್ನ ಪ್ರಶ್ನೆ ಸರಿಯಾಗಿದೆ. ಭೂಮಿಯಿಂದ ಕಾಣುವ ಆಕಾಶವು ನೀಲಿಯಾಗಿರಲು ಕಾರಣ ಬೆಳಕಿನ ಪ್ರತಿಫಲನ. ಭೂಮಿ ಮೇಲೆ ಬಿದ್ದ ಬೆಳಕು ಪ್ರತಿಫಲಿಸುತ್ತದೆ ಮತ್ತು ಭೂಮಿಯ ವಾತಾವರಣ ಹೊಂದಿರುವುದರಿಂದ ಆಕಾಶವು ನೀಲಿಯಾಗಿ ಕಾಣುತ್ತದೆ.



ಬಾಹ್ಯಾಕಾಶವು ಕಪ್ಪು ಬಣ್ಣದಲ್ಲಿ ಕಾಣುತ್ತದೆ. ಏಕೆಂದರೆ ಅದು ಬಹುತೇಕ ಖಾಲಿ ಸ್ಥಳವಾಗಿದೆ. ಬೆಳಕನ್ನು ಪ್ರತಿಫಲಿಸಲು ಅಲ್ಲಿ ಯಾವುದೇ ವಸ್ತುಗಳಿಲ್ಲ. ಸಾಮಾನ್ಯವಾಗಿ ಬಾಹ್ಯಾಕಾಶದಲ್ಲಿ ಎಲ್ಲಾ ನಕ್ಷತ್ರಗಳು ಬೆಳಕು ಸೂಸುತ್ತವೆ. ಆದರೆ ಈ ಬೆಳಕು ಪ್ರತಿಫಲನ ಹೊಂದಲು ಅಲ್ಲಿ ಯಾವುದೇ ಭೌತಿಕ ವಸ್ತುಗಳಿಲ್ಲ. ಬಾಹ್ಯಾಕಾಶದಲ್ಲಿ ಅನೇಕ ಬೆಳಕಿನ ಮೂಲಗಳಿದ್ದರೂ, ಭೂಮಿಯ ಕಡೆಗೆ ಪ್ರತಿಫಲಿಸುವುದಿಲ್ಲ. ಹಾಗಾಗಿ ಬಾಹ್ಯಾಕಾಶವು ನಮ್ಮ ಕಣ್ಣಿಗೆ ಕಪ್ಪಗೆ ಕಾಣುತ್ತದೆ. ಇದನ್ನು ನಾವು ಒಂದು ಉದಾಹರಣೆಯೊಂದಿಗೆ ತಿಳಿಯೋಣ. ರಾತ್ರಿ ವೇಳೆ ಮನೆಯ ಟೆರೇಸ್ ಮೇಲೆ ನಿಂತು ಆಕಾಶಕ್ಕೆ ದೊಡ್ಡದಾದ ಟಾರ್ಚನ ಬೆಳಕು ಬಿಡಿ. ಆಗ ಆಕಾಶ ನೀಲಿಯಾಗಿ ಕಾಣುವುದೇ? ಇಲ್ಲ. ಏಕೆಂದರೆ ನೀವು ಬಿಟ್ಟ ಬೆಳಕು ಆಕಾಶದಲ್ಲಿ ಲೀನವಾಯಿತೇ ಹೊರತು ಪ್ರತಿಫಲನಹೊಂದಿ ಬರಲಿಲ್ಲ. ಹಾಗೆಯೇ ಬಾಹ್ಯಾಕಾಶದಲ್ಲಿ ಎಲ್ಲಾ ದಿಕ್ಕುಗಳಿಂದಲೂ ನಕ್ಷತ್ರಗಳ ಬೆಳಕು ಹರಡುತ್ತದೆ. ಅಲ್ಲಿ ಯಾವುದೇ ಭೌತಿಕ ವಸ್ತುಗಳು, ಕಣಗಳು ಇಲ್ಲ. ವಸ್ತುಗಳ ಮೇಲೆ ಬೆಳಕು ಬಿದ್ದು, ಪ್ರತಿಫಲನಗೊಂಡ ಬೆಳಕು ನಮ್ಮ ಕಣ್ಣಿಗೆ ಬಿದ್ದಾಗ ಮಾತ್ರ ವಸ್ತು ಕಾಣುತ್ತದೆ. ಬೆಳಕು ಪ್ರತಿಫಲನಗೊಳ್ಳದೇ ಕಣ್ಣಿಗೆ ಯಾವ ವಸ್ತುವೂ ಕಾಣುವುದಿಲ್ಲ. ಕಾರಣ ಬೆಳಕು ನಮ್ಮ ಕಣ್ಣಿಗೆ ಪ್ರತಿಫಲನ ಹೊಂದದೆ ಇರುವುದರಿಂದ ಬಾಹ್ಯಾಕಾಶ ನಮಗೆ ಕಪ್ಪಾಗಿ ಕಾಣುತ್ತದೆ.


## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


# ಶಾಹು ಮಹಾರಾಜ ಮತ್ತು ಅಂಬೇಡ್ಕರ್ ಸ್ನೇಹ

ಕೊಲ್ಹಾಪುರಕ್ಕೆ ಹೋದಾಗಲೆಲ್ಲ ನಾನು ಭೇಟಿ ಮಾಡುವ ವ್ಯಕ್ತಿಗಳಲ್ಲಿ ಜಯಸಿಂಗರಾವ್ ಪವಾರರೂ ಒಬ್ಬರು. ಅವರ 'ರಾಜರ್ಷಿ ಶಾಹೂ ಛತ್ರಪತಿ: ಒಬ್ಬ ಸಾಮಾಜಿಕ ಕ್ರಾಂತಿಕಾರಿ ರಾಜ' (ಅನು: ಚಂದ್ರಕಾಂತ ಪೋಕಳೆ) ಕೃತಿಯು ಭಾರತದ ಪ್ರಗತಿಶೀಲ ದೊರೆಗಳನ್ನು ಅರ್ಥಮಾಡಿಕೊಳ್ಳುವ ನನ್ನ ದೃಷ್ಟಿಕೋನವನ್ನೇ ಪಲ್ಲಟಿಸಿತು. ಭಾರತದಲ್ಲಿ ಸಾಮಾಜಿಕ ಸುಧಾರಣೆಯ ಪ್ರಯೋಗಗಳು ನಡೆದ ಕೋರೆಗಾಂವ್, ಮಹಾಡ್, ಪುಣೆ, ಬಸವಕಲ್ಯಾಣಗಳ ಪಂಕ್ತಿಯಲ್ಲಿ ಕೊಲ್ಹಾಪುರವೂ ಒಂದೆಂದು ಮನವರಿಕೆಗೊಳಿಸಿತು.

ಕೊಲ್ಹಾಪುರದ ತಿರುಗಾಟವನ್ನು ನಾನು ಸಾಮಾನ್ಯವಾಗಿ ಛತ್ರಪತಿ ಶಾಹು ಅರಮನೆಯಿಂದ ಶುರುಮಾಡುತ್ತೇನೆ. ಬಳಿಕ ಅರಮನೆ ಬದಿಯಿರುವ ಹೊಳೆಗಿಳಿದು ಶಾಹೀ ಸ್ನಾನಘಟ್ಟಕ್ಕೆ ಹೋಗುತ್ತೇನೆ. ದೊರೆ ಕಟ್ಟಿಸಿದ ವಿಶಾಲ ಕೆರೆ, ಸ್ಥಾಪಿಸಿದ ಕುಸ್ತಿ ಮೈದಾನ, ದಲಿತ ಮಾಲೀಕತ್ವದಲ್ಲಿದ್ದ ಹೋಟೆಲಿನ ಜಾಗ ಹಾಗೂ ರಂಗಮಂದಿರಗಳನ್ನು ಕಾಣುತ್ತೇನೆ. ಇವೆಲ್ಲವೂ ದೊರೆ ಕೈಗೊಂಡ ವಿವಿಧ ಪ್ರಯೋಗದ ಕುರುಹುಗಳು. ಇವುಗಳಲ್ಲೆಲ್ಲ ಶಾಹೀ ಸ್ನಾನಘಟ್ಟಕ್ಕೆ ವಿಶಿಷ್ಟ ಸ್ಥಾನವಿದೆ. ಇದು ದೊರೆಯ ಸ್ನಾನದ ಹೊತ್ತಲ್ಲಿ, ಅರಮನೆಯ ಪುರೋಹಿತನು 'ಶೂದ್ರದೊರೆಗೆ ವೇದಮಂತ್ರಗಳನ್ನು ಪಠಿಸಲಾರೆ' ಎಂದು ನಿರಾಕರಿಸಿದ ಜಾಗ. ಇದನ್ನರಿತ ಶಾಹು ತೀವ್ರ ಅಪಮಾನ ಅನುಭವಿಸುತ್ತಾರೆ. ಈ ಅಪಮಾನದ ಚಾರಿತ್ರಿಕ ವಿದ್ಯಮಾನವು ವೇದೋಕ್ತ ಪ್ರಕರಣವೆಂದು ಹೆಸರಾಗಿದೆ. ಇದು ಕೊಲ್ಹಾಪುರದ ರಾಜ್ಯನೀತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿತು. ರಾಜ್ಯದ ದಲಿತರಿಗೆ ಕೆಳಜಾತಿಗಳಿಗೆ ಸಾಮಾಜಿಕ ನ್ಯಾಯ ದೊರಕಿಸುವ ಚಳುವಳಿಗೆ ನಾಂದಿ ಹಾಡಿತು. ಶೂದ್ರರು ವೇದಮಂತ್ರ ಕಲಿತು ಪುರೋಹಿತರಾಗುವ ಶಾಲೆಯನ್ನು ಸ್ಥಾಪಿಸುವ, ಬ್ರಾಹ್ಮಣ ಅಧಿಕಾರಿಗಳ ಅಧಿಕಾರವನ್ನು ಕಡಿತಗೊಳಿಸುವ, ಹಳ್ಳಿಗಳಲ್ಲಿ ದಲಿತರು ಮಾಡುತ್ತಿದ್ದ ಕಡ್ಡಾಯ ಸೇವೆ ನಿಲ್ಲಿಸಿ ಸ್ವತಂತ್ರ ರೈತಾಪಿಗಳಾಗಿ ಘೋಷಿಸುವ, ಬ್ರಾಹ್ಮಣೇತರ ಚಳುವಳಿಯನ್ನು ಹುಟ್ಟುಹಾಕುವ, ಪರ್ಯಾಯ ಆಧ್ಯಾತ್ಮಿಕ ಚಿಂತನೆಯ ಸತ್ಯಶೋಧಕ ಸಂಸ್ಥೆ ಆರಂಭಿಸುವ, ದಲಿತರು-ಶೂದ್ರರು ನಡೆಸುವ ಪತ್ರಿಕೆಗಳಿಗೆ ಅನುದಾನ ನೀಡುವ, ಶಾಹು ಅವರನ್ನು ದಕ್ಷಿಣ ಭಾರತದ ಶೂದ್ರ ಚಳುವಳಿಗಳ ಜತೆ ಬೆಸೆವ ಸರಣಿ ಕಾರ್ಯಕ್ರಮಗಳಿಗೆ ಪ್ರೇರಕವಾಯಿತು. ಇದರ ಭಾಗವಾಗಿ ಶಾಹು ಅವರು ನಗರದ ಮಧ್ಯದಲ್ಲಿ ಗಂಗಾರಾಮ ಕಾಂಬಳೆ ಎಂಬ ದಲಿತನಿಗೆ 'ಸತ್ಯಸುಧಾರಕ ಹೋಟೆಲು' (1916) ಹಾಕಿಕೊಟ್ಟರು. ಮಾತ್ರವಲ್ಲ, ತಮ್ಮ ಪರಿವಾರದೊಂದಿಗೆ ಬಂದು ಹೋಟೆಲಿನಲ್ಲಿ ಚಹಾಪಾನ ಮಾಡುತ್ತಿದ್ದರು. ಅಲ್ಲಿ ಚಹಾಪರಾಳ ಸ್ವೀಕರಿಸಿದ ರಶೀದಿಯನ್ನು ಅರ್ಜಿಗೆ ಲಗತ್ತಿಸಿದರೆ ಕಛೇರಿಯಲ್ಲಿ ಸ್ವೀಕಾರವಾಗುವ ನಿಯಮ ಜಾರಿಗೊಳಿಸಿದರು. ದಮನಿತರು ಸಂಘಟಿತರಾಗಿ ಸಮಾನತೆ ಸ್ವಾತಂತ್ರ್ಯ ಸ್ವಾಭಿಮಾನಕ್ಕಾಗಿ ಚಳುವಳಿ ಮಾಡುವ ಒಂದು ಕ್ರಮವಿದೆ. ಆದರಿದು ಸ್ವತಃ ಪ್ರಭುತ್ವವೇ ಸಾಮಾಜಿಕವಾಗಿ ಅಧಿಕಾರಸ್ಥವಾದ ವರ್ಗವನ್ನು ಎದುರು ಹಾಕಿಕೊಂಡು, ತನ್ನ ದಲಿತ-ಶೂದ್ರ ಪ್ರಜೆಗಳ ಪರವಾಗಿ ನಡೆಸಿದ ಕಾರ್ಯಾಚರಣೆ. ಇದುವೇ ಶಾಹು-ಅಂಬೇಡ್ಕರ್ ಸ್ನೇಹಕ್ಕೂ ಬುನಾದಿ ಹಾಕಿತು.

20ನೇ ಶತಮಾನದಲ್ಲಿ ಭಾರತದ ಧಾರ್ಮಿಕ ಸಾಮಾಜಿಕ ಚಳುವಳಿಗಳ ತಾತ್ವಿಕತೆಯನ್ನು ಎರಡು ವಿಚಾರಧಾರೆಗಳು ಪ್ರಭಾವಿಸಿದವು. ಮೊದಲನೆಯದು-ಫುಲೆ, ವಿವೇಕಾನಂದ, ನಾರಾಯಣಗುರು, ಪೆರಿಯಾರ್, ಶಾಹು, ಅಂಬೇಡ್ಕರ್ ಅವರ ಧಾರೆ. ಇದು ಶೂದ್ರ-ದಲಿತರಿಗೆ ಸ್ವಾಭಿಮಾನದ ಪ್ರಜ್ಞೆಯನ್ನು ಕೊಟ್ಟಿತು. ಎರಡನೆಯದು-ಬಂಕಿಮಚಂದ್ರ, ತಿಲಕ್, ಸಾವರ್ಕರ್ ಧಾರೆ. ಈ ಧಾರೆಯು ಪೇಶ್ವೆಗಳ ಪತನದ ಬಳಿಕ ಪ್ರಭುತ್ವದ ಬೆಂಬಲವಿಲ್ಲದೆ ಕಂಗಾಲಾಗಿದ್ದ ಸಂಪ್ರದಾಯವಾದಿಗಳಿಗೆ, ರಾಷ್ಟ್ರೀಯತೆಯ ಹೆಸರಲ್ಲಿ ಸಮಾಜವನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಹೊಸ ಹಾದಿಯನ್ನು ಕಲ್ಪಿಸಿತು. ವಸಾಹತುಶಾಹಿ ಕಾಲದಲ್ಲಿ ದೊರಕಿದ ಸಾರ್ವತ್ರಿಕ ಶಿಕ್ಷಣ ಪದ್ಧತಿಯಿಂದಲೂ ಮೀಸಲಾತಿಹಕ್ಕಿನ ಚಳುವಳಿಗಳಿಂದಲೂ ಶೂದ್ರರು, ಕೆಳಜಾತಿಯವರು ಹಾಗೂ ದಲಿತರು, ವಿದ್ಯಾಭ್ಯಾಸ ಮತ್ತು ನೌಕರಿ ಪಡೆದು ಸಾಧಿಸಿದ ಸಾಮಾಜಿಕ ಚಲನೆಗಳು, ತಮ್ಮ ಸಾಮಾಜಿಕ ಯಜಮಾನಿಕೆಯನ್ನು ಕಸಿದುಕೊಳ್ಳುತ್ತವೆ ಎಂಬ ತಳಮಳದಿಂದ ಪಾರಾಗಲು, ಹೊಸ ಸಿದ್ಧಾಂತ-ಸಂಘಟನೆಗಳನ್ನು ರೂಪಿಸಿ ಕೊಳ್ಳಲು ಇದು ಪ್ರೇರಿಸಿತು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ಕೆಳಜಾತಿಗಳ ಈ ಸಾಮಾಜಿಕ ಹಕ್ಕುಪ್ರಜ್ಞೆ ಮತ್ತು ಮೇಲ್ಜಾತಿಗಳ ಕಳೆದುಕೊಳ್ಳುವ ಆತಂಕಗಳ ಕುದಿತದಲ್ಲಿದ್ದ ಭಾರತೀಯ ಸಮಾಜದ ಈ ಸಂಕ್ರಮಣಾವಸ್ಥೆಯಲ್ಲಿ, ಕೆಲವು ರಾಜಪ್ರಭುತ್ವಗಳು ವಹಿಸಿದ ಪಾತ್ರಗಳು ಚಾರಿತ್ರಿಕವಾಗಿವೆ. 20ನೇ ಶತಮಾನದ ಮೊದಲ ದಶಕಗಳಲ್ಲಿ, ಬ್ರಾಹ್ಮಣೇತರರಿಗೆ ಶಿಕ್ಷಣ-ನೌಕರಿಗಳಲ್ಲಿ ಮೀಸಲಾತಿ ನೀಡುವುದಕ್ಕೆ ಮೈಸೂರು ಬರೋಡಾ ಕೊಲ್ಹಾಪುರ ಸಂಸ್ಥಾನಗಳು ಮುಂದಾದವು. ನಾಲ್ವಡಿಯವರು ಮಿಲ್ಲರ್ ಆಯೋಗದ ವರದಿಯನ್ನು ಜಾರಿಗೊಳಿಸಿದರು. ಅದನ್ನು ವಿರೋಧಿಸಿದ ವಿಶ್ವೇಶ್ವರಯ್ಯನವರ ರಾಜಿನಾಮೆ ಸ್ವೀಕರಿಸಿದರು. ವಸಾಹತುಶಾಹಿ ಆಳ್ವಿಕೆಯನ್ನು ಒಪ್ಪಿಕೊಂಡಿದ್ದ ಈ ಮೂರೂ ಸಂಸ್ಥಾನಗಳು ಸ್ವಾತಂತ್ರ್ಯ ಚಳುವಳಿಯ ಭಾಗವಾಗಲಿಲ್ಲ. ಆದರೆ ತಮಗೆ ಸಿಕ್ಕ ಸೀಮಿತ ಅಧಿಕಾರದಲ್ಲಿ ಸಾರ್ವತ್ರಿಕ ಶಿಕ್ಷಣ, ಸಾಮಾಜಿಕ ಸುಧಾರಣೆ, ಆಧುನಿಕ ಕೈಗಾರಿಕಾ ಸ್ಥಾಪನೆ ಹಾಗೂ ಹೊಸ ವೈಚಾರಿಕತೆಯನ್ನು ತರಲೆತ್ನಿಸಿದವು. (ವಿಶೇಷವೆಂದರೆ ಬರೋಡ ಹಾಗೂ ಮೈಸೂರು ಸಂಸ್ಥಾನದ ದೊರೆಗಳಿಗೆ ಶಿಕ್ಷಕನಾಗಿದ್ದವರು ಉದಾರವಾದಿ ಮನೋಭಾವದ ಫ್ರೇಜರ್.) ಬರೋಡೆ ಸಂಸ್ಥಾನವು ಅಂಬೇಡ್ಕರರಿಗೆ ಉನ್ನತ ಶಿಕ್ಷಣಕ್ಕಾಗಿ ಅಮೆರಿಕ್ಕೆ ಕಳಿಸಿಕೊಟ್ಟರೆ, ಇಂಗ್ಲೆಂಡಿನಲ್ಲಿ ಕಲಿಕೆ ಮಾಡಲು ಕೊಲ್ಹಾಪುರ ನೆರವಾಯಿತು. ಈ ಹಿನ್ನೆಲೆಯಲ್ಲಿ ಕರ್ನಾಟಕದ ದಲಿತ ಸಂಘಟನೆಗಳು ತಮ್ಮ ಕರಪತ್ರ-ಭಿತ್ತಿಪತ್ರಗಳಲ್ಲಿ, ಬುದ್ಧ ಬಸವ ಪೆರಿಯಾರ್ ಅಂಬೇಡ್ಕರ್ ಫುಲೆ ಜತೆ, ದೊರೆಗಳಾಗಿದ್ದ ಟಿಪ್ಪು ಶಾಹು ನಾಲ್ವಡಿಯವರ ಚಿತ್ರಗಳನ್ನು ಒಟ್ಟಿಗೆ ಕಾಣಿಸುವುದು ಆಕಸ್ಮಿಕವಲ್ಲ.

ಕೊಲ್ಹಾಪುರದ ಅರಮನೆಯ ಚಿತ್ರಪಟಗಳಲ್ಲಿ ಶಾಹು ಅವರು ಬ್ರಿಟಿಶ್ ಅಧಿಕಾರಿಗಳನ್ನು ಸ್ವಾಗತಿಸುವ, ಅವರ ಜತೆ ಕುಳಿತಿರುವ, ಇಂಗ್ಲೆಂಡ್ ಪ್ರವಾಸ ಮಾಡುತ್ತಿರುವ, ಮುಂಬೈ ವೈಸರಾಯರಿಂದ ಪದವಿ ಸ್ವೀಕರಿಸುತ್ತಿರುವ ದೃಶ್ಯಗಳಿವೆ. ತಿಲಕ್ ಮೊದಲಾದ ಮೇಲ್ಜಾತಿ ಕಾಂಗ್ರೆಸ್ ನಾಯಕರು ಶಾಹು ಅವರನ್ನು 'ಬ್ರಿಟಿಶರ ಬಾಲಬಡುಕ' ಎಂದು ಟೀಕಿಸುತ್ತಿದ್ದರು. ದೊರೆಯ ಬ್ರಿಟಿಶ್‌ನಿಷ್ಠೆಗೆ ದಲಿತ-ಶೂದ್ರರ




ಸಾಮಾಜಿಕ ಎಚ್ಚರ, ಆಧುನಿಕತೆ, ವೈಚಾರಿಕತೆಗಳ ಮುಖವಿರುವುದನ್ನು ಅವರು ಪರಿಗಣಿಸಲಿಲ್ಲ. ಈ ಮಾತು ಕೋರೆಗಾಂವ್ ಸ್ಮಾರಕಕ್ಕೂ ಅನ್ವಯವಾಗುತ್ತದೆ. ಬ್ರಿಟಿಶ್ ಸೇನೆಯಲ್ಲಿದ್ದ ಮಹಾರ್ ರೆಜಿಮೆಂಟ್, ಸಾಮಾಜಿಕವಾಗಿ ಸಂಪ್ರದಾಯವಾದಿಗಳಾಗಿದ್ದ ಪೇಶ್ವೆಗಳನ್ನು ಸೋಲಿಸಿದ ಸಂಕೇತವಾಗಿ ಸದರಿ ಸ್ಮಾರಕವನ್ನು ನಿರ್ಮಿಸಿತು. ಇದನ್ನು ದಲಿತರು ವಿಮೋಚನೆಯ ಪ್ರತೀಕವೆಂದು ಪರಿಭಾವಿಸಿದರು. ಹೀಗೆ 19-20ನೇ ಶತಮಾನಗಳ ಸಮಾಜ ಸುಧಾರಣ ಚಳುವಳಿಗಳಲ್ಲಿ, ವಸಾಹತುಶಾಹಿ ಆಧುನಿಕತೆ, ಶಿಕ್ಷಣ, ಕೈಗಾರಿಕೀಕರಣ, ಪಾಶ್ಚಿಮಾತ್ಯ ವೈಚಾರಿಕತೆ, ವಿಜ್ಞಾನ ಹಾಗೂ ಪ್ರಗತಿಶೀಲ ರಾಜಸಂಸ್ಥಾನಗಳು ಬಳ್ಳಿಯಂತೆ ಬೆಸೆದುಕೊಂಡಿವೆ. ಈ ಬೆಸೆತದಲ್ಲಿ ಕೊಲ್ಹಾಪುರ ಸಂಸ್ಥಾನದ ಸ್ಥಾನವು ಮಹತ್ವದ್ದಾಗಿದೆ.

ಶಾಹು ಅವರಿಗೂ ಉತ್ತರ ಕರ್ನಾಟಕಕ್ಕೂ ಹಿಂದಿನಿಂದಲೂ ನಂಟಿತ್ತು. ರಾಯಬಾಗವು ಅವರ ಮೃಗಯಾ ವಿನೋದದ ಜಾಗವಾಗಿತ್ತು. ಅವರ ಆರಂಭದ ವಿದ್ಯಾಭ್ಯಾಸ ಧಾರವಾಡದಲ್ಲಿ ನಡೆಯಿತು. ಅವರ ಸಾಮಾಜಿಕ ಸಂಬಂಧಗಳು 'ಕರ್ನಾಟಕ ಬ್ರಾಹ್ಮಣೇತರ ಸಾಮಾಜಿಕ ಪರಿಷತ್ತು' (ಧಾರವಾಡ: ಜುಲೈ 27 1920) ಸಮಾವೇಶದಿಂದ ಆರಂಭಗೊಂಡವು. ಸರ್ ಸಿದ್ಧಪ್ಪ ಕಂಬಳಿಯಂತಹ ಉತ್ತರ ಕರ್ನಾಟಕ ಲಿಂಗಾಯತ ಮುಖಂಡರ ನಾಯಕತ್ವದಲ್ಲಿ ಆರಂಭವಾಗಿದ್ದ ಶಿಕ್ಷಣ ಮತ್ತು ನೌಕರಿಯಲ್ಲಿ ಸಮಾನ ಅವಕಾಶ ಕೇಳುವ ಆಂದೋಲನದ ಭಾಗವಾಗಿ ಏರ್ಪಟ್ಟ ಕಾರ್ಯಕ್ರಮವಿದು. ಇದರ ಅಧ್ಯಕ್ಷತೆಯನ್ನು ಸಿದ್ಧಾರೂಢ ಸ್ವಾಮಿಗಳು ವಹಿಸಿದ್ದರು. ಸಮಾವೇಶದ ಉದ್ಘಾಟನ ಭಾಷಣದಲ್ಲಿ ಶಾಹು ತಮ್ಮ ಧಾರವಾಡದ ದಿನಗಳನ್ನು ಸ್ಮರಿಸುತ್ತಾರೆ. ಸಮಾವೇಶಕ್ಕೆ ಮದರಾಸಿನಿಂದ ಜಸ್ಟೀಸ್ ಚಳುವಳಿಯ ತ್ಯಾಗರಾಜ ಚೆಟ್ಟಿ ಆಗಮಿಸಿದ್ದರು. ಜಸ್ಟೀಸ್ ಚಳುವಳಿಯನ್ನು ಅಧ್ಯಯನ ಮಾಡಲು ಸ್ವತಃ ಶಾಹು ಮದ್ರಾಸಿಗೆ ಹೋಗಿದ್ದರು. ತಮ್ಮ ಭಾಷಣದಲ್ಲಿ 'ಮದ್ರಾಸಿನ ಬ್ರಾಹ್ಮಣೇತರ ಚಳುವಳಿಯಂತಹ ಚಳುವಳಿ ಮಹಾರಾಷ್ಟ್ರದಲ್ಲಿ ಹುಟ್ಟಬೇಕಾಗಿದೆಯೆಂದೂ, ಮದರಾಸಿನ ಚಳುವಳಿಗಾರರ ಮುಂದೆ ಮುಂಬೈ ಪುಣೆ ಚಳುವಳಿಗಾರರು ಬಾಲಿಶವಾಗಿ ಕಾಣುತ್ತಾರೆಂದೂ' ಅವರು ನುಡಿದರು. ಚಳುವಳಿ ಕಟ್ಟಲು ಬೇಕಾದ ಸಂಪನ್ಮೂಲ ಮತ್ತು ರಾಜ್ಯಾಧಿಕಾರ ಅವರಲ್ಲಿದ್ದವು. ಆದರೆ ಸೈದ್ಧಾಂತಿಕ ಸ್ಪಷ್ಟತೆ ಕೊಡುವವರು ಇಲ್ಲವಾಗಿತ್ತು.

ಈ ಚಾರಿತ್ರಿಕ ಸನ್ನಿವೇಶದಲ್ಲಿ ಶಾಹು ಅವರಿಗೆ ಅಂಬೇಡ್ಕರ್ ಸ್ನೇಹ ಏರ್ಪಟ್ಟಿತು. ಶಾಹು ಅವರ ಅಕಾಲಿಕ ನಿಧನದಿಂದ ಈ ಸೈದ್ಧಾಂತಿಕ ಗೆಳೆತನ 3-4 ವರ್ಷಗಳ ಅವಧಿಯದಷ್ಟೇ ಆಗಿತ್ತು. ಈ ಕಿರವಧಿಯಲ್ಲಿ ಇಬ್ಬರೂ ಮಾಡಿದ ಭೇಟಿ ಮತ್ತು ಚರ್ಚೆ, ಬರೆದುಕೊಂಡ ಪತ್ರಗಳು ಅವರಲ್ಲಿದ್ದ ಸಮಾನ ಮನಸ್ಕತೆಯನ್ನು ಸೂಚಿಸುತ್ತವೆ. ಅಮೆರಿಕೆಯಲ್ಲಿ ಪಿಎಚ್.ಡಿ., ಪಡೆದು ಬಂದಿದ್ದ ತರುಣ ಅಂಬೇಡ್ಕರ್ ಬಗ್ಗೆ ಶಾಹು ಅವರಿಗೆ ಮಾಹಿತಿಯಿತ್ತು. ಅಂಬೇಡ್ಕರರ ಪ್ರಖರ ವಿದ್ವತ್ತು ಮತ್ತು ಚಿಂತನೆಗಳು ತಮ್ಮ ಸಾಮಾಜಿಕ ಸುಧಾರಣ ಕಾರ್ಯಾಚರಣೆಗೆ ಇಂಬಾಗುತ್ತವೆ ಎಂದವರು ಭಾವಿಸಿದ್ದರು. ಹೀಗಾಗಿ ಅವರು ಮುಂಬೈನಲ್ಲಿ ಕಾಲೇಜು ಅಧ್ಯಾಪಕರಾಗಿದ್ದ ಅಂಬೇಡ್ಕರರನ್ನು ಹುಡುಕಿಕೊಂಡು (1919) ಹೋದರು. ತಮ್ಮನ್ನು ಹುಡುಕಿ ಸ್ವತಃ ದೊರೆ ಬಂದಿದ್ದು ಅಂಬೇಡ್ಕರ್ ಅವರಿಗೆ ವಿಸ್ಮಯ ತರುತ್ತದೆ. ಇದಾದ ಬಳಿಕ ಶಾಹು ಅಂಬೇಡ್ಕರ್ ಅವರನ್ನು ಕೊಲ್ಹಾಪುರಕ್ಕೆ ಹಲವು ಸಲ ಕರೆಸಿಕೊಂಡು ಚರ್ಚೆ ಮಾಡುತ್ತಾರೆ. ದೊರೆಯು, ಬ್ರಾಹ್ಮಣೇತರರ ಪತ್ರಿಕೆಗಳಿಗೆ ನೆರವು ನೀಡುವುದನ್ನು ಅರಿತಿದ್ದ ಅಂಬೇಡ್ಕರ್, ತಾವು ಪ್ರಕಟಿಸ ಬಯಸುತ್ತಿರುವ 'ಮೂಕನಾಯಕ' ಪತ್ರಿಕೆಗೆ ನೆರವು ಕೋರುತ್ತಾರೆ. ಕೂಡಲೇ ಮಹಾರಾಜರು ಧನಸಹಾಯ ಮಂಜೂರು ಮಾಡುತ್ತಾರೆ. 'ಮೂಕನಾಯಕ'ದಲ್ಲಿ ಅಂಬೇಡ್ಕರ್, ಶಾಹು ಅವರ ಸುಧಾರಣೆಗಳನ್ನು ಸಮರ್ಥಿಸುವ ಮತ್ತು ಅವರ ವಿರೋಧಿಗಳನ್ನು ಖಂಡಿಸುವ ಲೇಖನ ಬರೆಯತೊಡಗುತ್ತಾರೆ. ಭಾರತದ ದೊಡ್ಡ ವಿದ್ವಾಂಸ ಮತ್ತು ಸಾಮಾಜಿಕ ರಾಜಕೀಯ ಸಿದ್ಧಾಂತಿಯೊಬ್ಬನ ತಾಲೀಮಿನ ಗರಡಿಯಂತೆ ಮೂಕನಾಯಕದ ಲೇಖನಗಳಿವೆ. 'ರಾಜರ್ಷಿ ಶಾಹೂ ಮಹಾರಾಜ ಮತ್ತು ವಿರೋಧಿಗಳ ಕಾಕಗರ್ಜನೆ' ಎಂಬ ಲೇಖನದಲ್ಲಿ (ಜುಲೈ 1920) 'ತಮ್ಮನ್ನು ವಿರೋಧಿಸುತ್ತಿರುವ ಕಾಕಗರ್ಜನೆಗೆ ಮಣಿಯದೆ ಛತ್ರಪತಿಯವರು ತಮ್ಮ ಸಾಮಾಜಿಕ ನ್ಯಾಯ ಮತ್ತು ಸತ್ಯದ ಚಳುವಳಿಯಿಂದ ಕಿಂಚಿತ್ತೂ ಹಿಂದೆ ಸರಿಯಬಾರದು' ಎಂದು ಅಂಬೇಡ್ಕರ್ ಬರೆಯುತ್ತಾರೆ.

ಕ್ರಾಂತಿಕಾರಕ ವಿಚಾರಗಳನ್ನು ಸಾಕಾರಗೊಳಿಸಲು, ರಾಜಕೀಯ ಅಧಿಕಾರದ ಮಹತ್ವವನ್ನು ಅಂಬೇಡ್ಕರ್ ಚೆನ್ನಾಗಿ ಅರಿತಿದ್ದರು. ದಮನಿತರು ಕೇವಲ ಪ್ರತಿರೋಧದ ಚಳುವಳಿಯಲ್ಲಿ ಮಾತ್ರವಲ್ಲದೆ, ರಾಜ್ಯಾಧಿಕಾರವನ್ನು ಹಸ್ತಗತ ಮಾಡಿಕೊಳ್ಳಬೇಕೆಂಬ ಚಿಂತನೆಗೆ ಅವರ ಈ ಅನುಭವಗಳು ನೆರವಾದವು.

ಶಾಹು-ಅಂಬೇಡ್ಕರ್ ಇಬ್ಬರೂ ಎರಡು ಸಮಾವೇಶಗಳಲ್ಲಿ ವೇದಿಕೆ ಹಂಚಿಕೊಂಡರು. ಮೊದಲನೆಯದು 'ಅಖಿಲ ಮಹಾರಾಷ್ಟ್ರ ಬಹಿಷ್ಕೃತ ಸಮಾಜ ಪರಿಷತ್ತಿ'ನ (ಮಾರ್ಚ 1920) ಮಾಣಗಾಂವದ ಸಮಾವೇಶ. ಈ ಸಮಾವೇಶದಲ್ಲಿ ಶಾಹು ಅವರು 'ದಲಿತರು ಅಂಬೇಡ್ಕರ್ ಅವರಂತಾಗಲು ಯತ್ನಿಸಬೇಕು' ಎಂದು ಕರೆಗೊಡುತ್ತಾರೆ. ಮಹಾರಾಷ್ಟ್ರಕ್ಕೆ ಸೀಮಿತವಾಗಿದ್ದ ಪರಿಷತ್ತು, ಅಖಿಲ ಭಾರತೀಯ ವಿಸ್ತರಣೆ ಪಡೆದ ನಂತರ ಮೊದಲ ಸಭೆ (ಮೇ 1920) ನಾಗಪುರದಲ್ಲಿ ಸೇರುತ್ತದೆ. ಅಲ್ಲಿನ ಭಾಷಣದಲ್ಲಿ ಶಾಹು ಅವರು 'ಅಂಬೇಡ್ಕರ್ ಭಾರತದ ಸಮಸ್ತ ದಮನಿತರ ಪಾಲಿಗೆ ಬೆಳಕಾಗುವರು; ರಾಜ್ಯ ಕಳೆದುಕೊಂಡರೂ ಸರಿಯೇ ನಿಮಗಾಗಿ ಹೋರಾಡುವುದನ್ನು ನಿಲ್ಲಿಸುವುದಿಲ್ಲ' ಎಂದು ಘೋಷಿಸುವರು. ಪರಿಷತ್ತಿನ ಮೂರನೇ ಸಭೆ (ಫೆಬ್ರ. 1922) ದೆಹಲಿಯಲ್ಲಿ ಸೇರುತ್ತದೆ. ಆಗ ಅಂಬೇಡ್ಕರ್ ಲಂಡನ್ನಿಗೆ ಕಲಿಯಲು ಹೋಗಿರುತ್ತಾರೆ. ಸಮಾವೇಶದಲ್ಲಿ ಶಾಹು ಮಾತಾಡುತ್ತ 'ಇವತ್ತಿನ ಅಧ್ಯಕ್ಷತೆಯ ಗೌರವ ಸುಶಿಕ್ಷಿತ ಉತ್ಸಾಹಿ ತರುಣನಾದ ಮಿ. ಅಂಬೇಡ್ಕರ್‌ಗೆ ಸಿಗಬೇಕಿತ್ತು. ನಿಮ್ಮ ನಿಜವಾದ ನಾಯಕ ಅವರು. ಅವರ ಆದರ್ಶವನ್ನು ಕಣ್ಣೆದುರಿಗಿಸಿಕೊಂಡು ಅವರಂತಾಗಲು ಪ್ರಯತ್ನಿಸಿರಿ. ನಾನು ನಿಮ್ಮವನೆಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ. ನಾನು ನಿಮ್ಮ ಗುಲಾಮ, ದಾಸ. ನನ್ನಿಂದ ಬೇಕಾದ ಸೇವೆ ಮಾಡಿಸಿಕೊಳ್ಳಿ' ಎಂದು ವಿನಂತಿಸುತ್ತಾರೆ. ತಮಗಿಂತ 16 ವರ್ಷ ಚಿಕ್ಕವರಾದ ಅಂಬೇಡ್ಕರ್ ಬಗ್ಗೆ ಶಾಹು ಅವರು ಪ್ರಿಯಸ್ನೇಹಿತ, ತರುಣ ಗೆಳೆಯ, ಮಿ. ಅಂಬೇಡ್ಕರ್ ಎಂದು ಸಂಬೋಧಿಸುತ್ತಾರೆ. ಅವರಿಗೆ ಅಂಬೇಡ್ಕರರ ವಿದ್ವತ್ತು ಮತ್ತು ವಿಚಾರವಂತಿಕೆ ಬಗ್ಗೆ ಅಪಾರ ಗೌರವವಿತ್ತು. ಅಂಬೇಡ್ಕರ್ ಲಂಡನಿನಲ್ಲಿದ್ದಾಗ, ತಮ್ಮ ಇಂಗ್ಲೆಂಡಿನ ಗೆಳೆಯರಿಗೆ ಪತ್ರ ಬರೆದು, ಅಂಬೇಡ್ಕರ್ ವಿಚಾರಗಳನ್ನು ಆಲಿಸುವಂತೆಯೂ ಅದಕ್ಕೆ ಬ್ರಿಟಿಶ್ ಸಮಾಜದಲ್ಲಿ ಮಾನ್ಯತೆ ದೊರಕಿಸಿಕೊಡುವಂತೆಯೂ ಶಾಹು ಕೋರುತ್ತಾರೆ.


ಇಷ್ಟೇ ಗೌರವವನ್ನು ಅಂಬೇಡ್ಕರ್ ಛತ್ರಪತಿಯವರನ್ನು ಕುರಿತು ಇರಿಸಿಕೊಂಡಿದ್ದರು. ಇಂಗ್ಲೆಂಡಿನಿಂದ ಧನಸಹಾಯ ಕೋರಿ ದೊರೆಗೆ ಬರೆದ ಪತ್ರದಲ್ಲಿ (2021), "ನೀವು ಹಿಂದೂಸ್ತಾನದಲ್ಲಿರುವ ಸಾಮಾಜಿಕ ಪ್ರಜಾಪ್ರಭುತ್ವದ ಚಳುವಳಿಯ ಆಧಾರಸ್ಥಂಭ" ಎಂಬ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ; ಶಾಹು ಅವರ ಸಲಹೆಯಂತೆ, ದಲಿತರ-ಶೂದ್ರರ ನಿಲುವನ್ನು ಮಂಡಿಸಲು ಲಂಡನಿನಲ್ಲಿ ಒಂದು ಸಂಸ್ಥೆ ಸ್ಥಾಪಿಸಲು ಯತ್ನಿಸುತ್ತಾರೆ. ಶಾಹು ಅವರ ಅಕಾಲಿಕ ಸಾವಿಗೆ (1922) ದುಃಖಿಸುತ್ತ ಇಂತಹ 'ಸಖ ಅಸ್ಪೃಶ್ಯರಿಗೆ ಈ ಹಿಂದೆ ಲಭಿಸಿಲ್ಲ. ಮುಂದೆಯೂ ಲಭಿಸುವನೊ ಇಲ್ಲವೋ ಸಂಶಯ' ಎಂದು ಉದ್ಗರಿಸುತ್ತಾರೆ. ತಾವು ಏಕಾಂಗಿಯಾಗಿ ಹೋರಾಡುವಾಗೆಲ್ಲ ಶಾಹು ಅವರನ್ನು ನೆನೆಯುತ್ತಾರೆ. 'ಕೊಲ್ಹಾಪುರದಲ್ಲಿ ಶಾಹು ಅವರು ನಿಜವಾದ ಪ್ರಜಾಪ್ರಭುತ್ವದ ನಿಜವಾದ ಮುಹೂರ್ತದ ಕಂಬ ಸ್ಥಾಪಿಸಿದರು' ಎಂದು ವರ್ಣಿಸುತ್ತಾರೆ. ಶಾಹು ಅವರು ಜಾರಿಮಾಡಿದ್ದ ವಿಧವಾವಿವಾಹ ಕಾನೂನು, ಅಂತರ್ಜಾತೀಯ ಕಾನೂನು, ವಿವಾಹ ವಿಚ್ಛೇದನ ಕಾನೂನು, ವಾರಸಾ ಹಕ್ಕಿನ ಕಾನೂನು, ದೇವದಾಸಿ ಪದ್ಧತಿಯ ನಿರ್ಬಂಧ- ಎಂಬ ಸ್ತ್ರೀಪರ ಕಾನೂನುಗಳ ಮಹತ್ವವನ್ನು ಅಂಬೇಡ್ಕರ್ ಅರಿತಿದ್ದರು. ಈ ಅರಿವು ಸಂವಿಧಾನ ರಚನೆಯಲ್ಲೂ, ಕಾನೂನು ಮಂತ್ರಿಯಾಗಿ ಹಿಂದೂಕೋಡ್ ಬಿಲ್ ರೂಪಿಸುವಲ್ಲೂ ನೆರವಾಯಿತು. ಮುಸ್ಲಿಮರ ಸಾಂಪ್ರದಾಯಿಕತೆ ಮತ್ತು ಮತೀಯ ರಾಜಕಾರಣಗಳನ್ನು ಕಟುವಾಗಿ ವಿಮರ್ಶಿಸಲು ಪ್ರೇರಕವಾಯಿತು. ಪುರೋಹಿತಶಾಹಿಯಿಂದ ಅಪಮಾನಿತ ದೊರೆಯ ಸಂಕಲ್ಪ ಮತ್ತು ದಲಿತ ಹಿನ್ನೆಲೆಯಿಂದ ಬಂದ ವಿದ್ವಾಂಸನ ಪ್ರತಿಭೆಗಳು, ಆಧುನಿಕ ಭಾರತ ನಿರ್ಮಾಣದಲ್ಲಿ ಭಾಗವಹಿಸಿದ ಈ ಬಗೆ, ಅಪೂರ್ವವಾಗಿದೆ.

ಶಾಹು ಸ್ವತಃ ಕುಸ್ತಿ ಪೈಲ್ವಾನರಾಗಿದ್ದರು. ಅವರಿಗೆ ಶಿಕಾರಿಯ ಹುಚ್ಚಿತ್ತು. ಕೊಲ್ಹಾಪುರದ ಅರಮನೆಯಲ್ಲಿ ಅವರು ಬೇಟೆಯಾಡಿದ ಪ್ರಾಣಿಗಳ ಅವಶೇಷಗಳಿವೆ. ಹುಲಿ ಕರಡಿಗಳ ಕಳೇಬರಗಳ ಮೇಲೆ ಕಾಲಿಟ್ಟು ನಿಂತಿರುವ ಫೋಟೊಗಳಿವೆ. ಬೇಟೆಯು ರಾಜರಾದವರಿಗೆ ಶಸ್ತ್ರ ತರಬೇತಿಯ ಅವಕಾಶವಾಗಿತ್ತು. ಬ್ರಿಟಿಶ್ ಕಾಲದ ಅಧಿಕಾರಸ್ಥರ ವಿಲಾಸ ಮತ್ತು ಮನರಂಜನೆಯ ಹವ್ಯಾಸವಾಗಿತ್ತು . ಏನೇಆದರೂ ಅಡವಿಯ ಪ್ರಾಣಿಗಳನ್ನು ಕೊಂದು ಅವುಗಳ ಕೊಂಬು ತಲೆಗಳನ್ನು ಆಲಂಕಾರಿಕ ವಸ್ತುವನ್ನಾಗಿ ಇಡುವುದನ್ನು ಕಾಣುವಾಗ ಸಂತೋಷವಾಗುವುದಿಲ್ಲ. ಶಾಹು ಅವರ ಹೆಸರು ಚರಿತ್ರೆಯಲ್ಲಿ ಉಳಿದಿರುವುದು ಈ ಮೃಗಬೇಟೆಯಿಂದಲ್ಲ. ಸಾಮಾಜಿಕ ಪ್ರಗತಿಯನ್ನು ನಿರಾಕರಿಸುವ ಸಂಪ್ರದಾಯವಾದ ಮತ್ತು ಪುರೋಹಿತಶಾಹಿಗಳ ಬೇಟೆಯಿಂದ. ವೇದೋಕ್ತ ಪ್ರಕರಣದ ಬಳಿಕ ಅವರು, ರಾಜ್ಯದ ಆಡಳಿತದಲ್ಲಿ ಜಾರಿ ತಂದ ಸುಧಾರಣ ಕಾರ್ಯಕ್ರಮಗಳು, ಮೇಲ್ಜಾತಿಗಳು ಅವರ ವಿರುದ್ಧ ಯುದ್ಧ ಸಾರಲು ಕಾರಣವಾದವು. ಕೆಲವು ಪತ್ರಿಕೆಗಳು ಶಾಹು ಅವರನ್ನು ಕೊನೆಯ ತನಕವೂ ದ್ವೇಷಿಸಿದವು. ಅವರ ನಿಧನಕ್ಕೆ ಸಂಭ್ರಮಾಚರಣೆ ಮಾಡಿದ ವರದಿಗಳೂ ಬಂದವು. (ಇಂತಹ ವರದಿಗಳು ಗಾಂಧಿ ಮತ್ತು ಅಂಬೇಡ್ಕರ್ ಸಾವಿನ ಹೊತ್ತಲ್ಲೂ ಬಂದವು.) ಆದರೆ ಶಾಹು ಅವರ ಪತ್ರ ಮತ್ತು ಭಾಷಣಗಳಲ್ಲಿ, ಸಮಾಜವನ್ನು ಹಿಡಿತದಲ್ಲಿ ಇಟ್ಟುಕೊಂಡಿರುವ ಪುರೋಹಿತಶಾಹಿಯ ಬಗ್ಗೆ ಆಗ್ರಹ ಮತ್ತು ಸಮಾಜ ಬದಲಿಸಬೇಕೆಂಬ ತಾತ್ವಿಕತೆ ಸ್ಪಷ್ಟವಾಗಿದೆ. ಅವರಿಗೆ ಅಂಬೇಡ್ಕರ್ ಸಿಕ್ಕಿದ್ದು ಯುದ್ಧಕ್ಕೆ ನಿಪುಣ ಸೇನಾಧಿಕಾರಿ ಸಿಕ್ಕಂತಾಗಿತ್ತು. ಮಹಾರರನ್ನು ಅಪರಾಧಿ ಸಮುದಾಯವೆಂದು ಕರೆದ ತಿಲಕರ ಮೇಲೆ ಖಟ್ಲೆ ಹೂಡಬಾರದೇಕೆ ಎಂದು ಅಂಬೇಡ್ಕರ್ ಅವರಿಗೆ ಒಮ್ಮೆ ಶಾಹು ಪತ್ರ ಬರೆದರು. ಆಗ ಅಂಬೇಡ್ಕರ್ 'ಈ ವಿಷಯದಲ್ಲಿ ಕಾನೂನು ಹೋರಾಟಕ್ಕಿಳಿದರೆ, ಶ್ರಮ, ಹಣ, ಸಮಯ ವ್ಯರ್ಥವಾಗುತ್ತದೆಯೆಂದೂ, ಇದರ ಬದಲಿಗೆ ದಲಿತರಿಗೆ ಉದ್ಧರಿಸುವ ಕಾರ್ಯಕ್ರಮಗಳತ್ತ ಗಮನಹರಿಸುವುದು ಸೂಕ್ತವೆಂದೂ ಉತ್ತರಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಶಾಹು ಅವರು ಮಾಣಗಾಂವ್ ಸಮಾವೇಶಕ್ಕೆ, ಬೇಟೆ ದಿರಿಸಿನಲ್ಲೇ ಕಾಡಿನಿಂದ ನೇರವಾಗಿ ಬಂದು ಭಾಗವಹಿಸುವ ಸನ್ನಿವೇಶವು ಸಾಂಕೇತಿಕವಾಗಿದೆ. ಕುವೆಂಪು ತಮ್ಮ ಪ್ರಸಿದ್ಧ ಭಾಷಣವೊಂದರಲ್ಲಿ 'ಸಂಪ್ರದಾಯವಾದದ ಹುಲಿಯ ಮೈಗೆ ಈಡು ಹೊಡೆದು ಗಾಯಗೊಳಿಸಬಾರದು. ತಲೆಗೆ ಹೊಡೆಯಬೇಕು. ಆದರೆ ಅದಕ್ಕೆ ಮೊದಲು ಸಂಪ್ರದಾಯವಾದಕ್ಕೆ ಶರಣಾಗಿರುವ ತಮ್ಮ ಮೆದುಳಿಗೆ ವೈಚಾರಿಕತೆಯ ಗುಂಡು ಹೊಡೆದುಕೊಳ್ಳಬೇಕು' ಎಂದು ಹೇಳಿದ್ದರು. ಶಾಹು ಮತ್ತು ಅಂಬೇಡ್ಕರ್ ಅವರು ಎರಡೂ ಬಗೆಯ ಗುಂಡುಗಳನ್ನು ಹೊಡೆದವರು. ಇವರ ಗುಂಡುಗಳು ರೂಪುಗೊಂಡಿದ್ದು, ಸಂತ ತುಕಾರಾಮ್, ಜ್ಯೋತಿಬಾಫುಲೆ, ಪಾಶ್ಚಿಮಾತ್ಯ ಆಧುನಿಕತೆ ಮತ್ತು ವಿಚಾರವಾದದ ಕುಲುಮೆಗಳಲ್ಲಿ.

## ಕವಿ ಮನಸು

### ಉಳಿಸು ನಿನ್ನುಸಿರಿಗಾಗಿ



ಅಳಿದಿರುವೆ ನಾನೆಂದು ನೀನಂದುಕೊಂಡಿರುವೆ
ಉಳಿದಿಹುದು ಜೀವವಿದು ಕೊಂಚ ಬುಡದಲ್ಲಿ

ಉಸಿರಿರಲು ನನ್ನಲ್ಲಿ ಕುಳಿತಿರೆನು ಬರಿಗೈಲಿ
ಬಸಿರನ್ನು ಹೊತ್ತಿರುವೆ ಸಫಲ ಯತ್ನದಲಿ

ದಾರಿಯಲಿ ಅಡ್ಡವಿದು ಬೇಡೆಂದು ಕಡಿದಿರುವೆ
ಬೇರನ್ನು ಉಳಿಸಿದ್ದೆ ನಿನ್ನ ಮರೆವಲ್ಲಿ

ಸಾಕಾಯ್ತು ನನಗಷ್ಟು ನೆಲದ ಋಣ ತೀರಿಸಲು
ಈ ಕಾಯಿ ನಿನಗಾಗಿ ಬಳಸು ಸೊಗಸಾಗಿ

ಗುಟ್ಟೊಂದು ನುಡಿಯುವೆನು ವೃಕ್ಷಗಳ ಆ ದೇವ
ಇಟ್ಟಿರುವ ಜೀವಿಗಳ ಬದುಕು ಸುಖಕಾಗಿ

ಮಾನವನು ಕೆಡಿಸಿರುವ ವಾಯುವಿನ
ಕೊಳೆ ತೆಗೆದು
ನಾನದನು ಮರಳಿಸುವೆ ನಿನ್ನುಸಿರಿಗಾಗಿ

ನಾವಿತ್ತ ಫಲಗಳನು ಮನಸಾರೆ ತಿಂದುಂಡು
ಸೇವಿಸಿದ ಸುಖ ಮರೆವ ಮನುಜ ಏಕಾಗಿ?

ಬಿರುಬಿಸಿಲ ಬೇಗೆಯಲಿ ಬಳಲಿರಲು ಜೀವಿಗಳು
ನೆರಳೀವ ವೃಕ್ಷಗಳ ಉಳಿಸು ನಿಮಗಾಗಿ

ಕಳೆಯದಿರು ಅವುಗಳನು, ಕಡಿದೆಸೆದು ವ್ಯಥೆ
ಪಡುವೆ
ಬೆಳೆಸುವುದು ಶುರುಮಾಡು ಸರ್ವ ಹಿತಕಾಗಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಸಂಸಾರ



ತಾವಿಬ್ಬರು, ತಮಗಿಬ್ಬರು ಎನ್ನುವ ಸಂಸಾರ
ಬೆರೆತು ಬಾಳಿದರೆ ಕಳೆದುಕೊಳ್ಳದು ಸಾರ
ಪ್ರೀತಿಯಿರಲು ಮೆಣಸೂ ಅನಿಸದು ಖಾರ
ಸತಿ ಜೊತೆಗಿದ್ದರೆ ಸಂಸಾರವಾಗದು ಭಾರ

ನಾಲ್ವರೂ ಒಟ್ಟಿಗೆ ಕುಳಿತು ತಿನ್ನಲು ಮಂಡಕ್ಕಿ
ಸಂತಸವ ಕಂಡು ಮರೆಯತ್ತದೆ ಹಾಡನ್ನು ಹಕ್ಕಿ
ಮಂಡಕ್ಕಿ ಬೇಕೆನ್ನುವುದು ಆ ಬಾನಿನ ಚುಕ್ಕಿ
ನೆಲಕ್ಕೆ ಬಿದ್ದಿದ್ದನ್ನು ತಿನ್ನುವುದು ಇರುವೆ ಹೆಕ್ಕಿ

ಕುಟುಂಬದೊಂದಿಗೆ ಕಳೆಯಬೇಕು ಸಮಯ
ಇದರಿಂದ ಸಿಕ್ಕಂತೆ ಬಹು ದೊಡ್ಡ ಆದಾಯ
ನಗುವಿನಿಂದ ಆಗುವುದು ನೋವು ಮಾಯ
ತನ್ನವರೊಂದಿಗೆ ಇರಲು ಕಾಡದು ಭಯ

ಏಳು ಬೀಳುವ ಈ ಸಂಸಾರವೆಂಬ ಸಾಗರ
ಜತನದಿಂದ ಈಜಿ ದಡ ಸೇರಿದರೆ ಸುಂದರ
ನಂಬಿಕೆ,ವಿಶ್ವಾಸಗಳೇ ಇಲ್ಲಿ ಮೂಲ ಆಧಾರ
ಹೊಂದಾಣಿಕೆಯಿಲ್ಲದಿರೆ ಸಂಸಾರವೇ ಘೋರ

– ವಿಜಯಲಕ್ಷ್ಮಿ ನಾಯ್ಕ್ ಬಿಳಿಯೂರು




# ಪ್ರವಾಸಿಗರ ಕಪ್ಪತ ಗುಡ್ಡದಲ್ಲಿ ಒಂದು ಚಾರಣ



ಪ್ರವಾಸಿಗರ ಸ್ವರ್ಗ' ಹಾಗೂ ಭಾರತದಲ್ಲೇ ಪರಿಶುದ್ಧವಾದ ಗಾಳಿ ಬಿಸೋ ಜಾಗ (ಗದಗ ಜಿಲ್ಲೆ) ಎಂದು ಖ್ಯಾತಿ ಪಡೆದಿರುವ ಕಪ್ಪದ ಗುಡ್ಡದಲ್ಲಿ ಕುಟುಂಬದೊಂದಿಗೆ ಚಾರಣ ಕೈಗೊಂಡೆನು. ಕಪ್ಪದ ಗುಡ್ಡ ಪ್ರದೇಶವು ಗದಗ ಜಿಲ್ಲೆಯ ಮುಂಡರಗಿ, ಶಿರಟ್ಟಿ ಪ್ರದೇಶಗಳನ್ನು ಆವರಿಸಿಕೊಂಡಿದೆ. ಕಪ್ಪತ್ ಎಂದರೆ ಪಾರಿವಾಳ, ಶಿವ ಮತ್ತು ಪಾರ್ವತಿ ವಾಸವಿದ್ದ ಸ್ಥಳ ಕಪ್ಪತ್ ಗುಡ್ಡ ಎಂಬ ಪ್ರತೀಥಿ ಇದೆ. ಕಪ್ಪತ್ ಗುಡ್ಡ ಪ್ರದೇಶವು ಸುಮಾರು 80 ಸಾವಿರ ಎಕರೆ ಭೂಪ್ರದೇಶವನ್ನು ಹೊಂದಿದ್ದು, ಹಚ್ಚ ಹಸಿರಿನಿಂದ ವನದೇವತೆ ರೂಪದಲ್ಲಿ ಕಂಗೊಳಿಸುತ್ತಿದೆ. ಎಪ್ಪತ್ತು ಗಿರಿಧಾಮಗಳಲ್ಲಿ ಸಿಗುವ ಔಷಧೀಯ ಗಿಡ ಮೂಲಿಕೆಗಳು ಈ ಕಪ್ಪದ ಗುಡ್ಡ ಪ್ರದೇಶದಲ್ಲಿ ಕಾಣ ಸಿಗುತ್ತವೆ. ದಾರಿಯ ಮಧ್ಯದಲ್ಲಿ ವಿವಿಧ ಪ್ರಭೇಧದ ಹೂಗಿಡಗಳು, ನವಿಲುಗಳ ಓಡಾಟ ಎಂತವರನ್ನೂ ಮನಸ್ಸು ಕಂಗೊಳಿಸುತ್ತದೆ. ಮುಂದೆ ಸಾಗಿದಂತೆ ಕೌಂಚಪಕ್ಷಿಗಳು, ಕಿಂಗ್‌ಫಿಷರ್ ಮತ್ತಿತರೆ ಪಕ್ಷಿಗಳು ಹಾಗೂ ಚಿಗರೆಯನ್ನೊಳಗೊಂಡಂತೆ ಇತರೆ ಪ್ರಾಣಿಗಳು ಸ್ವಾಗತ ಕೋರುವವು. ಕಪ್ಪದ ಗುಡ್ಡ ಪ್ರವೇಶದ ಪ್ರಾರಂಭದಲ್ಲಿ ಶ್ರೀ ಸದ್ಗುರು ಮಲ್ಲಿಕಾರ್ಜುನ ಸಾಧು ಮಹಾರಾಜರ ಧ್ಯಾನಯೋಗ ಆನಂದಾಶ್ರಮವನ್ನು ಭೇಟಿ ಮಾಡಿ ದತ್ತಾತ್ರೇಯ ದರ್ಶನ ಭಾಗ್ಯವನ್ನು ಪಡೆದು ಕೆಲ ನಿಮಿಷಗಳ ಕಾಲ ಧ್ಯಾನದಲ್ಲಿ ಕುಳಿತೆವು. ಆಶ್ರಮವನ್ನು ಪ್ರವೇಶಿಸಿ ಧ್ಯಾನಸಕ್ತರಾದ ನಂತರ ಒಂದಿಷ್ಟು ನೆಮ್ಮದಿಯ ಭಾವ ಮೂಡಿತು. ನಂತರ ಸುಕ್ಷೇತ್ರ ಶ್ರೀ ಕಪ್ಪತ್ತ ಮಲ್ಲೇಶ್ವರ ದೇವಸ್ಥಾನಕ್ಕೆ ತೆರಳಿ ಕಪ್ಪದ ಮಲ್ಲೇಶ್ವರ ದರ್ಶನ ಭಾಗ್ಯವನ್ನು ಪಡೆದ ನಂತರ ಗಾಳಿಗೋಪುರ ಸ್ಥಳವನ್ನು ಪ್ರವೇಶಿಸಿದೆವು. ಮುಂಜಾನೆಯ ವನದೇವತೆಯ ದರ್ಶನ ನಿಜಕ್ಕೂ ಜನ್ಮ ಸಾರ್ಥಕತೆಯ ಭಾವನೆ ಮೂಡಿಸಿತು. ಮುಂಗಾರು ಮಳೆಯ ಪ್ರವೇಶ ಕಪ್ಪದ ಗುಡ್ಡ ಇನ್ನೂ ಹಚ್ಚಹಸಿರಿನಿಂದ ಕಾಣಿಸಲು ಕಾರಣವೆಂಬುದು ತಿಳಿಯಿತು. ಶಾಲಾ ಮಕ್ಕಳಿಗೆ, ನಿಸರ್ಗ ಪ್ರೇಮಿಗಳಿಗೆ ಸ್ವರ್ಗದ ಅನುಭವವನ್ನು ಕಪ್ಪದಗುಡ್ಡ ನೀಡುತ್ತದೆ.



ಚಂದ್ರಲತ
ಶಿಕ್ಷಕಿ, ಹೊಸಪೇಟೆ

Hampi Times E-paper
SCAN AND READ

ಗಾಳಿಗೋಪುರದಿಂದ ನಂದಿವೇರಿ ಸಂಸ್ಥಾನ ಮಠಕ್ಕೆ ಭೇಟಿ ನೀಡಿದೆವು. ಪೂಜ್ಯ ಶ್ರೀ ಶಿವಕುಮಾರ ಮಹಾ ಸ್ವಾಮಿಗಳು ಕಳೆದ 20ವರ್ಷಗಳಿಂದ ಈ ಸಂಸ್ಥಾನದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಬ್ರಿಟೀಶರು ಈ ಭಾಗದಲ್ಲಿ ಸರ್ವೇ ಕಾರ್ಯ ನಡೆಸಿ ಸ್ಥಳೀಯ ಮಣ್ಣಿನಲ್ಲಿ ಬಂಗಾರದ ಅಂಶವಿರುವುದನ್ನು ದಾಖಲೆಗಳಲ್ಲಿ ಲಿಖಿತ ರೂಪದಲ್ಲಿ ದಾಖಲಿಸಿದ್ದಾರೆ. ಅಷ್ಟೇ ಅಲ್ಲದೆ ಇಲ್ಲಿನ ಕಲ್ಲುಗಳಲ್ಲಿ 75% ಕಬ್ಬಿಣದ ಅದಿರಿನ ಅಂಶವನ್ನು ಕಾಣಬಹುದಾಗಿದೆ. ಈ ಕಾರಣ ದಿಂದಾಗಿಯೆ ಕೆಲವು ಪ್ರತಿಷ್ಠಿತ ಕಂಪನಿಗಳು ಮೈನಿಂಗ್ ಮಾಡಲು ಮುಂದಾಗಿದ್ದು ಶ್ರೀ ಶಿವಕುಮಾರ ಮಹಾಸ್ವಾಮಿಗಳು ಅವರ ವಿರುದ್ಧ ಪ್ರತಿಭಟನೆ ಮತ್ತು ಕಾನೂನಾತ್ಮಕ ಹೋರಾಟಗಳನ್ನು ನಡೆಸಿ ಕಪ್ಪದ ಗುಡ್ಡವನ್ನು ಮೈನಿಂಗ್‌ನಿಂದ ರಕ್ಷಿಸಿದ್ದಾರೆ. ಇದು ಶ್ರೀಗಳ ಬಹುದೊಡ್ಡ ಸಾಧನೆಯಾಗಿದ್ದು, ಪರಿಸರ ಪ್ರೇಮಿಗಳು ಮತ್ತು ಸ್ಥಳೀಯರಿಂದ ಬಹು ಪ್ರಶಂಸೆಗೆ ಒಳಗಾಗಿದೆ.

ನಂದಿವೇರಿ ಸಂಸ್ಥಾನದಲ್ಲಿ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರಸಾದ ಸ್ವೀಕರಿಸಿದ ನಾವುಗಳು ಸ್ವಲ್ಪ ವಿಶ್ರಾಂತಿ ಪಡೆದು ಜಾಬಶೆಟ್ಟಿ, ಕಪ್ಪತ ಗುಡ್ಡ ವ್ಯಾಪ್ತಿಯಲ್ಲಿನ ಬಂಗಾರದ ಕೊಳ್ಳದಲ್ಲಿ ನಂದಿವೇರಿ ಮಠ ಮತ್ತು ದಾಕ್ಷಾಯಿಣಿ ಜಾಬಶೆಟ್ಟಿ ಫೌಂಡೇಷನ್ ಸಹಕಾರದೊಂದಿಗೆ ವನದೇವಿಗೆ ಬೀಜದುಂಡೆ ಚರಗ ನಮನ ಸಲ್ಲಿಸಲಾಯಿತು. ಸಸ್ಯ ತಜ್ಞರಾದ ಡಾ.ಆರ್.ಎಫ್. ಇಂಚಲ ಅವರನ್ನು ಭೇಟಿ ಮಾಡಿದಾಗ ಅವರು ಜೀವ ವೈವಿದ್ಯತೆ ಮತ್ತು ಸುಸ್ಥಿರ ಕೃಷಿ, ಸ್ವಾಸ್ಥ ಸಮಾಜ ಹಾಗೂ ಗ್ರಾಮ ನಿರ್ಮಾಣ ಇತ್ಯಾದಿ ಅಂಶಗಳ ಕುರಿತು ಮಾಹಿತಿ ನೀಡಿದರು.ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಯುವಕರು, ಸ್ಥಳೀಯರಾದ ವಿ.ವಿ. ಶೀರಿ, ಮಹಾಂತಪ್ಪ, ಪೂಜಾರ ಬಾಳೆ ದಂಡಬಂಗ, ಆನಂದ ಕರ್ಕಿ, ಕೆಂಪೆಗೌಡ, ಮಲ್ಲಿಕಾರ್ಜುನ ಸೇರಿದಂತೆ ಇತರರು ಇದ್ದರು.

ನಂತರ ಶ್ರೀಗಳೊಂದಿಗೆ ನಾವುಗಳೇಲ್ಲ ಕಾಡಿನಲ್ಲಿ ಚಾರಣ ಹೊರಟೆವು. ಶ್ರೀ ಕಾಡಿನ ಮದ್ಯದಲ್ಲಿ ಹರಿಯುವ ನೀರನ್ನು ತೋರಿಸಿ ಜಲದ ಮಹತ್ವ ಕುರಿತು ತಿಳಿಸಿದರು. ಅಲ್ಲಲ್ಲಿ ಚೆಕ್ ಬಂದಿಗಳು ಮತ್ತು ಇಂಗುಗುಂಡಿಗಳ ನಿರ್ಮಾಣ ಅಂತರ್ಜಲ ಮಹತ್ವವನ್ನು ಸಾರುತ್ತಿರುವುದು ವಿಶೇಷವಾಗಿತ್ತು. ಕಾಡಿನಲ್ಲಿ ಮಧ್ಯದಲ್ಲಿ ಸ್ವಲ್ಪ ಸ್ವಲ್ಪ ಅಂತರದಲ್ಲಿ ಔಷಧಿ ಸಸ್ಯಗಳನ್ನು ತೋರಿಸುತ್ತ ಶ್ರೀಗಳು ಅವುಗಳ ವಿವರಣೆಯನ್ನು ನೀಡಿದರು. ಬಂಗಾರದ ಹಳ್ಳವನ್ನು ವೀಕ್ಷಿಸಿದೆವು. ಮಳೆಗಾಲದಲ್ಲಿ ನೀರು ಹರಿಯುವ ಸಂದರ್ಭದಲ್ಲಿ ಈ ಹಳ್ಳದಲ್ಲಿ ಬಂಗಾರದ ಎಲೆ ತೇಲುತ್ತದೆ ಎನ್ನುವ ನಂಬಿಕೆಯಿದೆ. ಕಾನನದ ಹಸಿರು ವೃಕ್ಷಗಳಿಂದ ಸೂಸುವ ಚೈತನ್ಯಕಾರದ ಶುದ್ಧ ಗಾಳಿ ಸೇವನೆ ದಿವ್ಯಾನುಭವನ್ನು ನೀಡುತ್ತದೆ. ಇದೊಂದು ವನದೇವತೆಯೊಂದಿಗೆ ಭಾವಬಂಧ ಬೆಸೆಯುವ ಅಪರೂಪದ ಕ್ಷಣ. ಶಾರೀರಿಕ ಮತ್ತು ಮಾನಸಿಕ ವಿಕಸನಕ್ಕೆ ಸೋಪಾನ, ಅಪರೂಪದ ಸಸ್ಯಗಳ ವೀಕ್ಷಣೆ, ಸಸ್ಯ ಸಂರಕ್ಷಣೆ ಕುರಿತು ಸಂವಾದವು ಪರಿಸರ ಸಂರಕ್ಷಣೆಗೆ ಪ್ರೇರಣೆ ಸಿಕ್ಕಿತು. ಸಸ್ಯ ಸಂರಕ್ಷಣೆಯ ಸಂಕಲ್ಪವನ್ನು ಸೇರಿದ್ದವರೆಲ್ಲರೂ ಕೈಗೊಂಡೆವು.

ಪ್ರಕೃತಿಯೊಂದಿಗೆ ಭಾವಬಂಧ ಬೆಸೆದು ನೆಮ್ಮದಿಯ ಕ್ಷಣಗಳನ್ನು ಕಳೆಯಲು ನಿಸರ್ಗ ಪ್ರೇಮಿಗಳು ದಯವಿಟ್ಟು ಕಪ್ಪದ ಗುಡ್ಡದ ವೀಕ್ಷಣೆಗೆ ಬನ್ನಿ. ಆಧುನಿಕ ಜಗತ್ತಿನಲ್ಲಿ ಕಪ್ಪತ ಗುಡ್ಡ ವೀಕ್ಷಣೆ ಒಂದು ನೆಮ್ಮದಿಯ ತಾಣ ಎನ್ನುವುದಂತು ಸತ್ಯ. ಅತ್ಯಂತ ಹಸಿರಿನಿಂದ ಕಂಗೊಳಿಸುತ್ತಿರುವ ಕಪ್ಪದ ಗುಡ್ಡದ ವೀಕ್ಷಣೆಯು ಎಂತಹ ಪ್ರವಾಸಿಗನಿಗೆ ಆಗಲಿ ಪರಿಸರದ ಮೇಲೆ ಪ್ರೀತಿ ಮೂಡಿಸುತ್ತದೆ. ಆಧುನಿಕ ಒತ್ತಡದ ಜೀವನದ ಜಂಟಾಟಗಳಿಂದ ಸ್ವಲ್ಪ ಮಾನಸಿಕ ನೆಮ್ಮದಿಯೊಂದಿಗೆ ಅಲ್ಲಿನ ಗಿಡಮೂಲಿಕೆಗಳ ನೈಜ ಸತ್ವವನ್ನು ಸವಿಯಬೇಕಾದರೆ ಪರಿಸರ ಪ್ರಿಯರು ಕಪ್ಪದ ಗುಡ್ಡಕ್ಕೆ ಭೇಟಿ ನೀಡಲೇಬೇಕು. ಅಲ್ಲಿನ ಹಸಿರನ್ನು ಸವಿಯುತ್ತ ಗಿಡಮರಗಳು, ಹೂಗಳ ಸೌಂದರ್ಯದೊಂದಿಗೆ ಗುಡ್ಡದಿಂದ ಕೆಳಗೆ ಇಳಿಯಬೇಕಾದ ಸಂದರ್ಭ ನಿಜಕ್ಕೂ ರೋಮಾಂಚನ, ನಿಸರ್ಗ ಮಾತೆಯೊಂದಿಗೆ ಪ್ರೀತಿಯ ಸಾಗರದಲ್ಲಿ ಮಿಂದು ಆಕೆಯ ಪವಿತ್ರ ಜೋಗುಳ ಕೇಳಿ ನಮ್ಮ ಜೀವನ ಪುನೀತರಾಗಿಸಿಕೊಂಡೆವು. ಚಾರಣದಲ್ಲಿ ಸಸ್ಯಲೋಕದ ಅನನ್ಯಾನುಭವ, ಪ್ರಕೃತಿ ಮಡಿಲ ದಿವ್ಯಾನುಭೂತಿ ದೊರಕಿತಂತಾಯಿತು. ಶ್ರೀಗಳ ಪರಿಸರ ಕಾಳಜಿ ಮತ್ತು ಪ್ರವಾಸಿಗರಿಗೆ ಅವರು ಪರಿಸರದ ಮಹತ್ವ ಕುರಿತು ಸಂದೇಶಗಳು ಎಂತವರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ.

ಶಾಲಾ ವಿದ್ಯಾರ್ಥಿಗಳು, ಪ್ರಕೃತಿ ಪ್ರಿಯರು ಒಮ್ಮೆ ರಾಜ್ಯದ ಹೆಸರುವಾಸಿ ಕಪ್ಪತ ಗುಡ್ಡದ ಭೇಟಿಯನ್ನು ಮಾಡುವುದರಿಂದ ವೈವಿದ್ಯಮಯ ಸಸ್ಯಸಂಕುಲ, ಬಂಗಾರದ ಕೊಳ. ನಂದಿವೇರಿ ಮಠ, ಕಪ್ಪತ ಮಲ್ಲೇಶ್ವರ ದರ್ಶನ ಭಾಗ್ಯ ಇವುಗಳನ್ನು ಮರೆಯದಿರಿ.

# ಸರ್ಕಾರದ ಗ್ಯಾರಂಟಿ ಯೋಜನೆಗಳು ಅರ್ಹರಾದ ಪ್ರತಿಯೊಬ್ಬರಿಗೂ ತಲುಪಬೇಕು

### ಶಿವಮೂರ್ತಿ ಕೆ ಹೇಳಿಕೆ | ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು ಅರ್ಹರಾದ ಪ್ರತಿಯೊಬ್ಬರಿಗೂ ತಲುಪುವಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಶಿವಮೂರ್ತಿ ಕೆ. ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜುಲೈ 9ರಂದು ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮೀಣ ಮಟ್ಟದಲ್ಲಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಅಧಿಕಾರಿಗಳಲ್ಲಿ ಸೇವಾ ಮನೋಭಾವ ಇರಬೇಕು. ನಮ್ಮ ಸಮಾಜದಲ್ಲಿ ಇನ್ನು ಅನೇಕ ಜನರು ಪ್ರಮುಖ ಸೌಕರ್ಯಗಳಿಂದ ವಂಚಿತರಾಗಿದ್ದಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಕ್ಕೆ ಹಾಗೂ ಜಿಲ್ಲಾ ಮತ್ತು ತಾಲೂಕು ಸಮಿತಿಗಳಿಗೆ ಸೂಕ್ತವಾದ ಕಚೇರಿ ಹಾಗೂ ಪೀಠೋಪಕರಣಗಳ ಒದಗಿಸಬೇಕು ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದ್ದು, ಇದಕ್ಕೆ ಕೂಡಲೇ ವ್ಯವಸ್ಥೆಯಾದಲ್ಲಿ ಕಾಲಕಾಲಕ್ಕೆ ಸಭೆ ನಡೆಸಿ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿನ ಸಮಸ್ಯೆಗಳ ಕುರಿತು ಚರ್ಚಿಸಿ ಸಲಹೆ ಸೂಚನೆಗಳ ಮೇರೆಗೆ ಕೆಲಸದಲ್ಲಿ ನಿರತರಾಗಲೂ ಅನುಕೂಲವಾಗುತ್ತದೆ ಎಂದು ಪ್ರಾಧಿಕಾರದ ಉಪಾಧ್ಯಕ್ಷರು ಮತ್ತು ಎಲ್ಲ ಸದಸ್ಯರ ಪರವಾಗಿ ಜಿಲ್ಲಾಡಳಿತಕ್ಕೆ ಮನವಿ ಮಾಡುವೆ ಎಂದು ಶಿವಮೂರ್ತಿ ಅವರು ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಅವರು ಮಾತನಾಡಿ, ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾರ್ಯ ಪ್ರವೃತ್ತರಾಗಲು ಈಗಾಗಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಕಾರ್ಯ ನಿರ್ವಹಿಸಲಾಗುತ್ತದೆ. ತಾಲೂಕ ಮಟ್ಟದಲ್ಲಿನ ಅಧಿಕಾರಿಗಳೊಂದಿಗೆ ಸಹ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ. ಪ್ರಾಧಿಕಾರದ ಸದಸ್ಯರು ನೀಡಿದ ಮನವಿಯಲ್ಲಿನ ಅಂಶಗಳ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಎಲ್ಲ ಸದಸ್ಯರು ಜಿಲ್ಲಾಡಳಿತಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.



ಸಭೆಯಲ್ಲಿ ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು, ಸದಸ್ಯರು ಮಾತನಾಡಿ, ಸಭೆಗೆ ಹಲವಾರು ಸಲಹೆ ಸೂಚನೆಗಳನ್ನು ನೀಡಿದರು. ಸಂಬಂಧಪಟ್ಟ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಇದುವರೆಗೆ ಆಗಿರುವ ವಿವಿಧ ಗ್ಯಾರಂಟಿ ಯೋಜನೆಗಳ ಪ್ರಗತಿಯ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ವಿಜಯನಗರ ಜಿಲ್ಲೆಗೆ ಅನ್ನಭಾಗ್ಯ ಯೋಜನೆಯಡಿ ಜುಲೈ–2023 ರಿಂದ ಮೇ–2024ರ ಮಾಹೆಯವರೆಗೆ 171,45,89,740 ರೂ ಅನುದಾನ ಬಿಡುಗಡೆಯಾಗಿ ಪಾವತಿಯಾಗಿರುತ್ತದೆ. ಏಪ್ರಿಲ್ 2024 ಮತ್ತು ಮೇ 2024 ರ ಮಾಹೆಯಲ್ಲಿ 12,718 ಪಡಿತರ ಚೀಟಿಗಳಲ್ಲಿ 6417 ಗಳನ್ನು ಸರಿಪಡಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಮಲ್ಲಿಕಾರ್ಜುನ ನಾಯಕ ಅವರು ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 2,99,126 ಕುಟುಂಬದ ಯಜಮಾನಿ ಮಹಿಳೆಯರ ಪೈಕಿ 2,84,139 ಮಹಿಳೆಯರು ಹೆಸರನ್ನು ನೋಂದಾಯಿಸಿಕೊಂಡಿದ್ದು ಈ ಪೈಕಿ 2,81,721 ಫಲಾನುಭವಿಗಳಿಗೆ ತಲಾ 2000 ರೂ. ಮೊತ್ತವನ್ನು ಪಾವತಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಕೆ. ಬದಾವಲಿ, ಚಂದ್ರಪ್ಪ ಹುಲಿಕಟ್ಟಿ, ಕೆ.ಎಸ್. ಶಾಂತನಗೌಡ, ಸೊನ್ನದ ಗುರುಬಸವರಾಜ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಭಾಗ್ಯಲಕ್ಷ್ಮಿ ಭರಾಡ, ವೆಂಕಟರಮಣ ಡಿ., ಎಂ.ದಾದಾಪೀರ್, ಜೀಲನ್, ಬಸವರಾಜ್ ಗೌಡ್ರ, ಎಲ್.ಚಂದ್ರನಾಯ್ಕ್, ಗುರುವಿನ ರವೀಂದ್ರ, ದೇವರಾಜ್ ಪಿ.ಹೆಚ್., ಪರಶುರಾಮ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಲಕ್ಷ್ಮಿ, ಜೆಸ್ಕಾಂನ ಕಾರ್ಯಪಾಲಕ ಅಭಿಯಂತರ ತೇಜನಾಯ್ಕ್, ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿ ಆರ್.ಪಿ.ವಜಂತ್ರಿ, ಜಿಲ್ಲಾಧಿಕಾರಿಗಳ ಕಚೇರಿಯ ಸಿಬ್ಬಂದಿ ಸೀಮಾ ಉಪಸ್ಥಿತರಿದ್ದರು.

# ಜು.11ಕ್ಕೆ ಮಕ್ಕಳ ರಕ್ಷಣಾ ನೀತಿ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಕಾರ್ಯಾಗಾರ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ 'ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ–2023), ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೊ ಕಾಯ್ದೆ' ಕುರಿತು ಜು.11 ರಂದು ಬೆಳಿಗ್ಗೆ 9.30 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ವಸತಿ ನಿಲಯಗಳ ನಿಲಯಪಾಲಕರಿಗೆ, ನಿಲಯ ಮೇಲ್ವಿಚಾರಕರು, ವಸತಿ ಶಾಲೆಗಳ ಪ್ರಾಂಶುಪಾಲರು, ದೈಹಿಕ ಶಿಕ್ಷಕರು ಹಾಗೂ ವಾರ್ಡನ್‌ರವರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಜಿ.ಶಾಂತಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್ ಹೊಸಮನೆ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಕೆ.ಹೆಚ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕೊಪ್ಪಳದ ಯುನಿಸೆಫ್‌ನ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕ ರಾಘವೇಂದ್ರ ಭಟ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ.ಬಿ., ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ್ ಕೆ.ಎಸ್., ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣಾಧಿಕಾರಿ ವಿಠೋಬ ಹೊನಕಾಂಡೆ, ಮಕ್ಕಳ ಸಮಿತಿಯ ಅಧ್ಯಕ್ಷೆ ವಿಜಯಲಕ್ಷ್ಮೀ ಮೈದೂರು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಲಾಲಪ್ಪ ಎ.ಕೆ ಇತರರಿದ್ದರು.



## ಮೈಕ್ರೋ ನ್ಯೂಸ್

### ಕೂಡ್ಲಿಗಿ: ಅಂಗನವಾಡಿ ಹುದ್ದೆ ಅಧಿಸೂಚನೆ ರದ್ದು

**ಹಂಪಿ ಟೈಮ್ಸ್ ಹೊಸಪೇಟೆ**

ಕೂಡ್ಲಿಗಿ ತಾಲೂಕಿನ ಅಂಗನವಾಡಿಗಳಲ್ಲಿ ಖಾಲಿಯಿರುವ 5 ಕಾರ್ಯಕರ್ತೆಯರು ಹಾಗೂ 15 ಸಹಾಯಕಿಯರ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಈ ಹಿಂದೆ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದು ಪಡಿಸಲಾಗಿದೆ ಎಂದು ಕೂಡ್ಲಿಗಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

### ಕಾನೂನು ಪದವೀಧರರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಆಡಳಿತ ನ್ಯಾಯಾಧೀಕರಣದಲ್ಲಿ ಕಾನೂನು ನ್ಯಾಯ ವಾದಿ ವೃತ್ತಿಯ ಪ್ರಾಯೋಗಿಕ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ 2 ವರ್ಷ ತರಬೇತಿ ನೀಡಲಿದ್ದು ತಿಂಗಳಿಗೆ 10,000 ರೂ.ಶಿಷ್ಯವೇತನ ಮಂಜೂರು ಮಾಡಲಾಗುವುದು. ಆಸಕ್ತ ಕಾನೂನು ಪದವಿ ಪಡೆದ ಅಭ್ಯರ್ಥಿಗಳು ಜುಲೈ 30ರೊಳಗೆ ಇಲಾಖೆಯ ವೆಬ್‌ಸೈಟ್ www.sw.kar.nic.in.ನಲ್ಲಿ Stipend To Law Graduate ರಲ್ಲಿ ಅರ್ಜಿ ಸಲ್ಲಿಸಿ ಕಚೇರಿಗೆ ಒಂದು ಪ್ರತಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ್–1) ತಿಳಿಸಿದ್ದಾರೆ.

# ಸರ್ಕಾರಿ ಶಾಲೆಗಳಲ್ಲಿ ಟ್ಯೂಶನ್ ಕ್ಲಾಸ್ ನೀಡಿ

## ಸಚಿವ ಎಸ್. ಮಧು ಬಂಗಾರಪ್ಪ ಹೇಳಿಕೆ | ನೀಟ್ ಕ್ಲಾಸ್, ಸಿಇಟಿ ತರಬೇತಿಗೆ 20 ಸಾವಿರ ಕೋಟಿ ಅನುದಾನ

**ಹಂಪಿ ಟೈಮ್ಸ್ ಕೊಪ್ಪಳ**

ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರಿದ್ದು, ಇನ್ಮುಂದೆ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಅವಶ್ಯಕತೆ ಇರುವ ಮಕ್ಕಳಿಗೆ ಟ್ಯೂಶನ್ ಕ್ಲಾಸ್ ನೀಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಎಸ್. ಮಧು ಬಂಗಾರಪ್ಪ ಅವರು ಶಾಲಾ ಮುಖ್ಯಸ್ಥರಿಗೆ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

2024–25ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಮಂಜೂರಾದ ಜಿಲ್ಲೆಯ ಕುಕನೂರು ತಾಲ್ಲೂಕಿನ ಕೋಮಲಾಪುರ ಗ್ರಾಮದಲ್ಲಿ ನೂತನ ಸರ್ಕಾರಿ ಪ್ರೌಢಶಾಲಾ ಪ್ರಾರಂಭಕ್ಕೆ ಜುಲೈ 10ರಂದು ಶಾಲಾ ನಾಮಫಲಕ ಅನಾವರಣಗೊಳಿಸುವುದರ ಮೂಲಕ ಚಾಲನೆ ನೀಡಿ, ಬಳಿಕ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಸಂಕಷ್ಟದಲ್ಲಿರುವವರ ಮಕ್ಕಳಿಗೆ ವಿದ್ಯಾಭ್ಯಾಸದ ಮೂಲಕ ಅವರನ್ನು ಮುನ್ನೆಲೆಗೆ ತರುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದ್ದು, ಈ ಭಾಗದದ ಶೈಕ್ಷಣಿಕ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ವಿಶೇಷ ಅನುದಾನವನ್ನು ಮೀಸಲಿಡಲಾಗಿದೆ. ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂಬುದು ನಮ್ಮ ಸರ್ಕಾರದ ಮುಖ್ಯ ಉದ್ದೇಶವಾಗಿದ್ದು, ನೀಟ್ ಕ್ಲಾಸ್, ಸಿಇಟಿ ಪರೀಕ್ಷೆಯ ಪೂರ್ವಭಾವಿ ತರಬೇತಿಯನ್ನು ಸರ್ಕಾರದಿಂದಲೇ ಉಚಿತವಾಗಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ತರಬೇತಿಗಾಗಿ ಈಗಾಗಲೇ ಅನುದಾನವನ್ನು ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಮೀಸಲಿಟ್ಟಿದ್ದಾರೆ. ಇದಲ್ಲದೆ ಸರ್ಕಾರಿ ಶಾಲೆಗಳಿಗೂ ಉಚಿತ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದ್ದು, ಈ ಸೌಲಭ್ಯ ಸದುಪಯೋಗ ಆಗಬೇಕು. ಶಾಲೆಯ ತರಗತಿ ಅವಧಿ ಪೂರ್ಣಗೊಂಡ ಬಳಿಕ ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಟ್ಯೂಶನ್ ಕ್ಲಾಸ್ ನೀಡಲು ಆಯಾ ಶಾಲೆಗಳ ಶಿಕ್ಷಕರು ಎಸ್.ಡಿ.ಎಂ.ಸಿ.ಯೊಂದಿಗೆ ಅನುಮತಿ ಹಾಗೂ ಗ್ರಾಮ ಪಂಚಾಯತ್ ಸಹಕಾರ ಪಡೆದು ಕ್ರಮ ಕೈಗೊಳ್ಳಬೇಕು.



ರಾಜ್ಯದಲ್ಲಿ 53 ಸಾವಿರ ಶಿಕ್ಷಕರ ಕೊರತೆಯಿತ್ತು. 10 ತಿಂಗಳಲ್ಲಿ ಸುಮಾರು 12 ಸಾವಿರಕ್ಕೂ ಅಧಿಕ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಹಂತ ಹಂತವಾಗಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಈ ಸಮಸ್ಯೆಯನ್ನು ಸರಿಪಡಿಸಲಾಗುವುದು. ಅನುದಾನಿತ ಶಾಲೆಗಳು ಸಹ ಸರ್ಕಾರದ ಒಂದು ಭಾಗವಾಗಿ ಕೆಲಸ ಮಾಡುತ್ತವೆ. ಈ ಅನುದಾನಿತ ಶಾಲೆಗಳಲ್ಲಿ 2015 ರಿಂದ 2024ರವರೆಗೆ ಕಳೆದ 9 ವರ್ಷಗಳಿಂದ ಶಿಕ್ಷಕರನ್ನು ಪಡೆದಿಲ್ಲ. ಇಂತಹ ಶಾಲೆಗಳಲ್ಲಿಯೂ ಸಹ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಹಾಗೂ ರಾಜ್ಯದಲ್ಲಿ 10 ರಿಂದ 18 ಸಾವಿರ ಸರ್ಕಾರಿ ಶಿಕ್ಷಕರ ನೇಮಕಕ್ಕೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ.

– ಎಸ್. ಮಧು ಬಂಗಾರಪ್ಪ, ಶಿಕ್ಷಣ ಸಚಿವರು

ತಳಕಲ್ ಗ್ರಾಮದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ನಿರ್ಮಾಣ ಮಾಡಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಇಂಜಿನಿಯರಿಂಗ್ ಕಾಲೇಜು ಭೇಟಿ ಸಂದರ್ಭದಲ್ಲಿಂದು ನಮ್ಮ ಸೊರಬ ಕ್ಷೇತ್ರ ವಿದ್ಯಾರ್ಥಿ ಇಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿರುವುದು ಕಂಡುಬಂತು. ತಳಕಲ್ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಯಾವುದೇ ಖಾಸಗಿ ಕಾಲೇಜುಗಳಿಗೆ ಕಡಿಮೆಯಿಲ್ಲ ಎಂಬಂತೆ ನಿರ್ಮಾಣವಾಗಿದೆ. ಸರ್ಕಾರದ ಹಣದಲ್ಲಿ ಬಡ ಮಕ್ಕಳು ಸಹ ಒಳ್ಳೆಯ ರೀತಿಯಲ್ಲಿ ಶಿಕ್ಷಣವನ್ನು ಪಡೆಯಬೇಕು ಎಂಬ ಕನಸನ್ನು ನನಸು ಮಾಡಿದ ಕೀರ್ತಿ ಬಸವರಾಜ ರಾಯರೆಡ್ಡಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ರಾಜ್ಯ ಸರ್ಕಾರವು ಅನ್ನಭಾಗ್ಯ, ಗೃಹಲಕ್ಷ್ಮೀ, ಶಕ್ತಿ, ಗೃಹಜ್ಯೋತಿ, ಶಕ್ತಿ, ಯುವನಿಧಿ ಸೇರಿದಂತೆ ವಿವಿಧ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅಂದಿನ ಕಾಲದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಿ, ರೈತರ ಬಾಳಿಗೆ ಬೆಳಕಾದರೆ, ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರವು ಗೃಹಜ್ಯೋತಿ ಯೋಜನೆಯನ್ನು ಜಾರಿಗೆ ಮಾಡುವುದರ ಮೂಲಕ ಪ್ರತಿಯೊಂದು ಮನೆಗೆ ಉಚಿತ ಬೆಳಕನ್ನು ನೀಡಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ರಾಜ್ಯ ಸರ್ಕಾರವು ವಿವಿಧ ಯೋಜನೆಗಳಡಿ ಹಾಗೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಶಾಲೆ, ಜೂನಿಯರ್ ಕಾಲೇಜುಗಳು, ಪದವಿ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿದೆ. ನಮ್ಮ ಸರ್ಕಾರವು ಜಾರಿಗೆ ತಂದ ಐದು ಗ್ಯಾರೆಂಟಿ ಯೋಜನೆಗಳಲ್ಲಿ ಅನ್ನಭಾಗ್ಯ ಯೋಜನೆಯಡಿ 4 ಕೋಟಿ 37 ಲಕ್ಷ ಜನಕ್ಕೆ 10 ಕೆ.ಜಿ. ಆಹಾರ ಧಾನ್ಯಗಳನ್ನು ಕೊಡಲಾಗುತ್ತಿದ್ದು, ಶೇ.85.3 ರಷ್ಟು ಜನರಿಗೆ ಆಹಾರಧಾನ್ಯಗಳು ತಲುಪುತ್ತಿವೆ. ಈ ಪ್ರಕ್ರಿಯೆ ತಮಿಳುನಾಡಿನಲ್ಲಿ ಶೇ.40, ಮಹಾರಾಷ್ಟ್ರದಲ್ಲಿ ಶೇ.60, ಗುಜರಾತ್ ರಾಜ್ಯದಲ್ಲಿ ಶೇ.50 ರಷ್ಟಿದ್ದು, ಇಡೀ ಭಾರತ ದೇಶದಲ್ಲಿ ಅತಿ ಹೆಚ್ಚಿನ ಆಹಾರಧಾನ್ಯಗಳನ್ನು ಉಚಿತವಾಗಿ ನೀಡುತ್ತಿರುವ ರಾಜ್ಯ ನಮ್ಮ ಕರ್ನಾಟಕವಾಗಿದೆ. ಗೃಹಲಕ್ಷ್ಮೀ ಯೋಜನೆಯಡಿ 1.29 ಕೋಟಿ ಮಹಿಳೆಯರಿಗೆ ಪ್ರತಿ ತಿಂಗಳು ರೂ. 2 ಸಾವಿರ ನೀಡಲಾಗುತ್ತಿದೆ. ಶಕ್ತಿ ಯೋಜನೆಯಡಿ ರಾಜ್ಯದ ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಪ್ರತಿದಿನ ಸರಾಸರಿ 63 ಲಕ್ಷ ಮಹಿಳೆಯರು ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ. 1.24 ಕೋಟಿ ಮನೆಗಳಿಗೆ ಗೃಹಜ್ಯೋತಿಯಡಿ 200 ಯುನಿಟ್ ಉಚಿತ ವಿದ್ಯುತ್ ನೀಡಲಾಗಿದೆ. ಉದ್ಯೋಗನಿಧಿ ಯೋಜನೆಗೆ 5 ಕೋಟಿಯನ್ನು ನೀಡಲಾಗಿದೆ ಎಂದರು.

ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಮೊದಲ ಆದ್ಯತೆ: ತಾವು 1985ರಲ್ಲಿ ಶಾಸಕರಾದಾಗ ಯಲಬುರ್ಗಾ ಕ್ಷೇತ್ರದಲ್ಲಿ ಕೇವಲ 7 ಶಾಲೆಗಳಿದ್ದವು. ಈ ಸಂಖ್ಯೆಯನ್ನು ಈಗ 60ಕ್ಕೆ ಏರಿಸಲಾಗಿದೆ. ಈ ಕ್ಷೇತ್ರಕ್ಕೆ ಇಂಜಿನಿಯರಿಂಗ್ ಕಾಲೇಜು, ಜೂನಿಯರ್ ಕಾಲೇಜು, ಡಿಪ್ಲೋಮಾ, ಪದವಿ ಕಾಲೇಜುಗಳನ್ನು ತರಲಾಗಿದ್ದು, ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿ ಈ ಭಾಗದ ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಿದ್ದೇನೆ ಎಂದ ಅವರು, ಕೋಮಲಾಪುರ ಪ್ರೌಢಶಾಲೆಗೆ 4 ಎಕರೆ ಜಮೀನು ಹಾಗೂ ಕೆರೆ ತುಂಬಿಸುವ ಯೋಜನೆಗೂ ಜಮೀನು ಅವಶ್ಯಕತೆ ಇದ್ದು, ರೈತರು ಜಮೀನು ನೀಡಲು ಮುಂದೆ ಬರಬೇಕು ಎಂದು ಹೇಳಿದರು.

**ವಿವಿಧ ಕಾರ್ಯಕ್ರಮಗಳಿಗೆ ಸಚಿವರಿಂದ ಚಾಲನೆ:**

ಜುಲೈ 10 ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಎಸ್. ಮಧು ಬಂಗಾರಪ್ಪ ಅವರು ಕುಕನೂರು ತಾಲ್ಲೂಕಿನ ತಳಕಲ್ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಹೆರಿಗೆ ಆಸ್ಪತ್ರೆ, ಕೋಮಲಾಪುರದ ನೂತನ ಸರ್ಕಾರಿ ಪ್ರೌಢಶಾಲೆ, ಯಲಬುರ್ಗಾ ತಾಲ್ಲೂಕಿನ ಕರಮುಡಿ ಗ್ರಾಮದ ನೂತನ ಪದವಿ ಪೂರ್ವ ಕಾಲೇಜು ಹಾಗೂ ದಮ್ಮೂರಿನ ನೂತನ ಸರ್ಕಾರಿ ಪ್ರೌಢಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳು ಇದ್ದರು

# ಮನೆ ಸುತ್ತ–ಮುತ್ತ ಸ್ವಚ್ಛತೆಯನ್ನು ಕಾಪಾಡಿ

## ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್ ಹೇಳಿಕೆ | ನಗರದಲ್ಲಿ ಡೆಂಗ್ಯೂ ಜ್ವರ ಹಾಗೂ ಸೊಳ್ಳೆಗಳ ಹಾವಳಿ ಹೆಚ್ಚಾಗುತ್ತಿದೆ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತುತ ಡೆಂಗ್ಯೂ ಜ್ವರ ಹಾಗೂ ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ನಾಗರಿಕರ ಆರೋಗ್ಯ ದೃಷ್ಟಿಯಿಂದ ಎಲ್ಲರೂ ಕಡ್ಡಾಯವಾಗಿ ತಮ್ಮ ಮನೆಒಳಗೆ ಹೊರಗೆ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಅರಿವು ಮೂಡಿಸಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಪಾಲಿಕೆಯ ಸಭಾಂಗಣದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದಲ್ಲಿ ಆರೋಗ್ಯ ಇಲಾಖೆಯ ಲಾರ್ವಾ ಸಮೀಕ್ಷೆ ನಡೆಯುತ್ತಿದ್ದು, ತಂಡವು ಮನೆಗೆ ಭೇಟಿ ನೀಡಿದಾಗ ಸಾರ್ವಜನಿಕರು ಸಹಕರಿಸಬೇಕು. ಪಾಲಿಕೆವತಿಯಿಂದ ಧೂಮೀ ಕರಣಮಾಡಲು ಕ್ರಮವಹಿಸಲಾಗುವುದು ಎಂದರು.

ಡೆಂಗ್ಯು ಜ್ವರ ಹರಡುವ ಎಡಿಸ್ ಜಾತಿಯ ಸೊಳ್ಳೆಗಳು ಸ್ವಚ್ಛ ನೀರಿನಲ್ಲಿ ಬೆಳೆಯುವುದರಿಂದ ಎಲ್ಲ ಸಾರ್ವಜನಿಕರು ತಮ್ಮ ಮನೆಯಲ್ಲಿ ಯಾವುದೇ ರೀತಿಯ ನೀರು ಸಂಗ್ರಹಣೆ ಇದ್ದಲ್ಲಿ ಸರಿಯಾಗಿ ಮುಚ್ಚಬೇಕು. ನೀರಿನಲ್ಲಿ ಸೊಳ್ಳೆ ಮರಿಗಳು ಇರುವುದು ಕಂಡುಬಂದಲ್ಲಿ ತಕ್ಷಣವೇ ನೀರನ್ನು ಸ್ವಚ್ಛಗೊಳಿಸಲು ತಿಳಿಸಬೇಕು ಎಂದರು. ಕಟ್ಟಡ ನಿರ್ಮಾಣ, ಅಂಗಡಿ ಸ್ಥಳ, ಟೈರ್, ಎಳೆನೀರು ಚಿಪ್ಪುಗಳಲ್ಲಿ ನಿಂತನೀರು ಇದ್ದರೆ ತಕ್ಷಣವೇ ನೀರು ತೆರುವುಗೊಳಿಸಿ ಸೊಳ್ಳೆಗಳ ಸಂತಾನೋತ್ಪತ್ತಿ ಯಾಗದಂತೆ ಎಚ್ಚರವಹಿಸಬೇಕು ಎಂದು ತಿಳಿಸಿದರು.ಸೊಳ್ಳೆಗಳು ಹಗಲು ಹೊತ್ತಿನಲ್ಲಿ ಕಚ್ಚುವ ಸೊಳ್ಳೆಗಳಾಗಿದ್ದು, ಸಾಧ್ಯವಾದಷ್ಟು ಮನೆಯ ಒಳಗೆ ಸೊಳ್ಳೆಗಳನ್ನ ನಿಯಂತ್ರಿಸಬಹುದಾದಂತಹ ಧೂಪ ಹಾಗೂ ಇತ್ಯಾದಿಗಳನ್ನು ಬಳಸಲು ಸೂಚಿಸಬೇಕು.



ಜ್ವರ, ಮೈ ಕೈ ನೋವು, ಸುಸ್ತಾದ ಲಕ್ಷಣಗಳು ಕಂಡು ಬಂದಲ್ಲಿ ಇಲ್ಲವೇ ಯಾವುದೇ ರೀತಿಯ ರೋಗಲಕ್ಷಣ ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು. ಡೆಂಗ್ಯೂ ಕುರಿತು ಸಾರ್ವಜನಿಕರು ಭಯಪಡದೆ ಜಾಗೃತರಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಸಾರ್ವಜನಿಕರಿಗೆ ವಿನಂತಿಸಿದರು.

**ಕಸ ಚೆಲ್ಲುವಂತಿಲ್ಲ, ಪ್ಲಾಸ್ಟಿಕ್ ಬಳಕೆ ನಿಷೇಧ:**

ನಗರದೆಲ್ಲೆಡೆ ಅಂಗಡಿ ಮಾಲೀಕರು, ಬೀದಿಬಿದಿ ವ್ಯಾಪಾರಸ್ಥರು, ಕಡ್ಡಾಯವಾಗಿ ತಮ್ಮ ಅಂಗಡಿಗಳ ಮುಂದೆ ಅವಶ್ಯಕತೆಗೆ ತಕ್ಕಂತೆ ಕನಿಷ್ಟ 50 ಲೀಟರ್ ಸಾಮರ್ಥ್ಯದ ಕಸದ ಬುಟ್ಟಿ ಇಡಬೇಕು. ಅಂಗಡಿಗಳ ಮುಂದೆ ಕಸಚೆಲ್ಲುವಂತಿಲ್ಲ.

ನಿಷೇಧಿತ ಪ್ಲಾಸ್ಟಿಕ್‌ವಸ್ತುಗಳ ಬಳಕೆ ಮಾಡುವಂತಿಲ್ಲ. ಉಲ್ಲಂಘನೆಯಾದಲ್ಲಿ ರೂ.500 ರಿಂದ ರೂ.10,000 ವರೆಗೆ ದಂಡವಿಧಿಸಿ ಜಲ ಸಂರಕ್ಷಣೆ ಕಾಯ್ದೆ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕ್ರಮ ಜರುಗಿಸಬೇಕು ಎಂದು ಹೇಳಿದರು.

ಬರುವ ಗೌರಿಗಣೇಶ ಹಬ್ಬದ ಪ್ರಯುಕ್ತ ನಗರದೆಲ್ಲಡೆ ಈ ಬಾರಿ ಕಡ್ಡಾಯವಾಗಿ ಪಿಓಪಿ ಮೂರ್ತಿಗಳ ತಯಾರಿಕೆ, ಪ್ರದರ್ಶನ ಹಾಗೂ ಮಾರಾಟವನ್ನು ನಿಷೇಧಿಸಿಲಾಗಿದೆ.

ಯಾರಾದರೂ ಪಿಓಪಿ ಮೂರ್ತಿಗಳನ್ನು ತಯಾರಿಸುವುದು, ಮಾರುವುದು ಕಂಡುಬಂದಲ್ಲಿ ಜಪ್ತಿ ಮಾಡಿ ದಂಡ ವಿಧಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು. ಈ ನಿಟ್ಟಿನಲ್ಲಿ ಸ್ವಚ್ಛ ಸುಂದರ ಬಳ್ಳಾರಿಗಾಗಿ ಪ್ರತಿಯೊಬ್ಬರೂ ಪಾಲಿಕೆಯೊಂದಿಗೆ ಸಹಕರಿಸಬೇಕು ಎಂದು ಕರೆ ನೀಡಿದರು. ಸಭೆಯಲ್ಲಿ ಉಪಮೇಯರ್ ಡಿ.ಸುಕುಂ, ಪಾಲಿಕೆ ಆಯುಕ್ತ ಜಿ.ಖಲೀಲ್‌ಸಾಬ್, ಸೇರಿದಂತೆ ಆರೋಗ್ಯ ಸ್ಥಾಯಿಸಮಿತಿ ಅಧ್ಯಕ್ಷರು ಸೇರಿದಂತೆ ಕರಾಮಾನಿಮಂ ಅಧಿಕಾರಿಗಳು, ಪೋಲಿಸ್ ಇಲಾಖೆ ಅಧಿಕಾರಿಗಳು, ತಾಲೂಕು ವೈದ್ಯಾಧಿ ಕಾರಿಗಳು ಹಾಗೂ ಪಾಲಿಕೆಯ ಆರೋಗ್ಯ ಶಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಆಧಾರ್ ಜೋಡಣೆಯಾದ್ರೆ ಸಬ್ಸಿಡಿ

### ಐ.ಪಿ ಸೆಟ್‌ಗಳ ಆರ್.ಆರ್.ಸಂಖ್ಯೆಗೆ ಆಧಾರ್ ಜೋಡಣೆ ಮಾಡಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ಹಗರಿಬೊಮ್ಮನಹಳ್ಳಿ ವಿಭಾಗ ವ್ಯಾಪ್ತಿಯ ಹೂವಿನ ಹಡಗಲಿ, ಕೂಡ್ಲಿಗಿ, ಕೊಟ್ಟೂರು ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಅಧಿಕೃತ ಐ.ಪಿ ಸೆಟ್ ಹೊಂದಿರುವ ರೈತರು ತಮ್ಮ ಐ.ಪಿ ಸೆಟ್‌ಗಳ ಆರ್.ಆರ್.ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಿಸಿಕೊಳ್ಳುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ. ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡದಿದ್ದಲ್ಲಿ ಸರ್ಕಾರವು ಸಬ್ಸಿಡಿಯನ್ನು ಬಿಡುಗಡೆ ಮಾಡುವುದಿಲ್ಲ ಎಂದು ಕೆಇಆರ್‌ಸಿ ಆದೇಶ ಹೊರಡಿಸಿದೆ. ರೈತರು ಜೋಡಣೆ ಮಾಡಿಸಲು ಹತ್ತಿರದ ಲೈನ್‌ಮ್ಯಾನ್, ಮೀಟರ್ ರೀಡರ್ ಹಾಗೂ ಎಲ್ಲ ಶಾಖಾ ಕಚೇರಿಗಳು, ಪಟ್ಟಣದ ಕಚೇರಿಯನ್ನು ಸಂಪರ್ಕಿಸಬಹುದು.

## ಉಜ್ಜಯಿನಿಯಲ್ಲಿ ಗೋ ಶಾಲೆ ಕಟ್ಟಡ ಶಂಕುಸ್ಥಾಪಪನೆ



ಕೊಟ್ಟೂರು ತಾಲೂಕಿನ ಶ್ರೀ ಉಜ್ಜಯಿನಿ ಮಹಾಪೀಠದ ಜಮೀನಿನಲ್ಲಿ ಬುಧವಾರ ಗೋ ಶಾಲೆಯ ನೂತನ ಕಟ್ಟಡಕ್ಕೆ ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಭೂಮಿ ಪೂಜೆ ನೇರವೇರಿಸ ನೆರವೇರಿತು. ಪೀಠದ ಅನೇಕ ಭಕ್ತರು ಪಾಲ್ಗೊಂಡಿದ್ದರು.

**IN THE COURT OF THE 2nd ADDL. CIVIL JUDGE AND JMFC AT HOSAPETE**

**Cri M.C.No. 871 /2024**

**M. Velumani and Others ......Petitioner**

Versus

**Commissioner cum Registrar birth and death CMC Hosapete .........Respondent**

**To, Whom so ever it may concern**

WHEREAS the above name M. Velumani wife of Marimuthu and her daughters and son of New Amaravathi Hosapete Hosapete taluk filed the above petition under section 13(3) of birth and death registration Act for obtaining death certificate of her husband Marimuthu son of Raju Goundar expired on 06.08.1992 at New Amaravathi Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 03-8-2024 at 11.00 O clock in the noon, to answer the petition as on the day fixed, otherwise the petition will be disposed in your absence.

Given under my hand and the seal of the Court, this 03 day of 07-2024.

By order of the court
Shiresthadhar
2nd Addl Civil Judg and JMFC
at Hosapete

**L.S, Ananda**
Advocate, Hosapete

**IN THE COURT OF THE Pril. CIVIL JUDGE AND JMFC AT HOSAPETE**

**Cri M.C.No 638/2024**

**Varadaneswari Ajjappa Kambi ........Petitioner** Versus
The commissioner cum Registrar Birth and death CMC of Hosapete **........Respondent**

To, **Whom so ever it may concern,**

WHEREAS the above name Varadaneswari Ajjappa Kambi daughter of Ajjappa basappa Kambi Hosapete Hosapete taluk filed the above petition under section 13(3) of birth and death registration Act for obtaining death certificate of her grandmother D. Eramma wife of D Panchappa expired on 05.04.1971 Devangapet Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 26/7/2024 11.00 O clock in the noon, to answer the petition as on the day fixed, otherwise the petition will be disposed in your absence.

Given under my hand and the seal of the Court, this 10/7/ day of 2024.

By order of the court
Shiresthadhar Pril.Civil Judge and JMCF at Hosapete

**L.S. Ananda**
Advocate, Hosapete

## ತೋಟಗಾರಿಕೆ ಯೋಜನೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ತೋಟಗಾರಿಕೆ ಇಲಾಖೆಯಿಂದ 2024–25ನೇ ಸಾಲಿನಲ್ಲಿ ತೋಟಗಾರಿಕೆ ಮಿಷನ್, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ (ಹನಿ ನೀರಾವರಿ), ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಯಾಂತ್ರೀಕರಣ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಮುಂತಾದ ಯೋಜನೆಗಳ ಅಡಿಯಲ್ಲಿ ಹಡಗಲಿ ತಾಲೂಕಿನ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶಾಶ್ವತ ನೀರಾವರಿ ಹಾಗೂ ತೋಟಗಾರಿಕೆ ಬೆಳೆ ಹೊಂದಿರುವ ಮತ್ತು ತೋಟಗಾರಿಕೆ ಬೆಳೆ ಬೆಳೆಯಲು ಇಚ್ಛೆಯುಳ್ಳ ರೈತರು 2024ರ ಜುಲೈ 25ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಹಿರಿಯ ಸಹಾಯಕ ನಿರ್ದೇಶಕರು ಹಡಗಲಿ–583219 ಕಚೇರಿಯಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಅಥವಾ ಕಚೇರಿ ದೂರವಾಣಿ ಸಂಖ್ಯೆ 08399–240136ನ್ನು ಸಂಪರ್ಕಿಸಲು ಕೋರಲಾಗಿದೆ.

## ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2022–23ನೇ ಸಾಲಿನ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರ ಅಡಿಯಲ್ಲಿ ವ್ಯಕ್ತಿ ಸಂಬಂದಿತ ಅನುಕೂಲಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆಗಸ್ಟ್ 08ರೊಳಗಾಗಿ ಸಲ್ಲಿಸಬಹುದಾಗಿದೆ.

ನೈರ್ಮಲ್ಯ ಕೆಲಸ ನಿರ್ವಹಿಸುತ್ತಿರುವ ಖಾಯಂ, ಹೊರಗುತ್ತಿಗೆ ಪೌರಕಾರ್ಮಿಕರ ಮಕ್ಕಳಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಬಡಜನ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸಹಾಯಧನ, ವಿಕಲಚೇತನರಿಗೆ ಕೃತಕ ಕೈ, ಕಾಲು ಜೋಡಣೆ ಕಲ್ಪಿಸುವುದು, ಶ್ರವಣ ದೋಷವುಳ್ಳವರಿಗೆ ಶಸ್ತ್ರಚಿಕಿತ್ಸೆ, ದೃಷ್ಟಿಹೀನರಿಗೆ ವಾಕಿಂಗ್ ಸ್ಟಿಕ್ ಹಾಗೂ ಇತರೆ ಅವಶ್ಯಕ ಪರಿಕರಗಳನ್ನು ಖರೀದಿಸುವುದು,

ಹೆಚ್ಚಿನ ಮಾಹಿತಿಗಾಗಿ www.hospetcity.gov.in ವೆಬ್‌ಸೈಟ್‌ಅನ್ನು ಸಂಪರ್ಕಿಸಬಹುದು. ಸೌಲಭ್ಯಗಳನ್ನು ಪಡೆಯಲು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳನ್ನು ನಗರಸಭೆ ನೋಟಿಸ್ ಬೋರ್ಡ್‌ನಲ್ಲಿ ಅಳವಡಿಸಲಾಗಿದೆ. ಹಾಗೂ ವಿಷಯ ನಿರ್ವಾಹಕ ಹತ್ತಿರ ಮಾಹಿತಿ ಮತ್ತು ಅರ್ಜಿಯನ್ನು ಪಡೆಯಲು ತಿಳಿಸಲಾಗಿದೆ ಎಂದು ಹೊಸಪೇಟೆ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕುರುಗೋಡು ಪುರಸಭೆ ವತಿಯಿಂದ ಪ್ರಸಕ್ತ ಸಾಲಿನ ಎಸ್.ಎಫ್.ಸಿ ಅನುದಾನ ಅಡಿ ಕುರುಗೋಡು ಪುರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಬಿ.ಇ, ಮೆಡಿಕಲ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಲ್ಯಾಪ್‌ಟ್ಯಾಪ್ ಖರೀದಿಸಲು ಸಹಾಯಧನ ಮತ್ತು ರಾಜ್ಯ, ರಾಷ್ಟ್ರೀಯ ಮಟ್ಟದ ಕಲೆ, ಸಾಂಸ್ಕೃತಿಕ ಹಾಗೂ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸಿದವರಿಗೆ ಪ್ರೋತ್ಸಾಹಧನ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಜು.26 ರೊಳಗಾಗಿ ಅರ್ಜಿ ಸಲ್ಲಿಸಬೇಕು.

**ಬೇಕಾದ ದಾಖಲೆ:** ಆಧಾರ್ ಕಾರ್ಡ್ ನಕಲು ಪ್ರತಿ, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಫಲಾನುಭವಿಯ ಭಾವಚಿತ್ರ, ಹಿಂದಿನ ಸಾಲಿನ ಎಲ್ಲಾ ಸೆಮಿಸ್ಟರ್ ಅಥವಾ ವರ್ಷಗಳ ಅಂಕಪಟ್ಟಿಯ ಜೆರಾಕ್ಸ್ ಪ್ರತಿ, ಪ್ರಸ್ತುತ ವರ್ಷದ ವ್ಯಾಸಂಗ ಪ್ರಮಾಣ ಪತ್ರ, ನೋಂದಣಿ ರಸೀದಿ, ಕ್ರೀಡೆಯಲ್ಲಿ ಭಾಗವಹಿಸಿದ್ದರೆ ಸಂಬಂಧಿಸಿದ ಪ್ರಮಾಣ ಪತ್ರ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಪುರಸಭೆ ಕಾರ್ಯಾಲಯಕ್ಕೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕುರುಗೋಡು ಪುರಸಭೆ ಕಾರ್ಯಾಲಯ ಅಥವಾ ದೂ.08393–263166 ಗೆ ಸಂಪರ್ಕಿಸಬಹುದು ಎಂದು ಎಂದು ಕುರುಗೋಡು ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA